ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ ಎಸ್‌ವೈಎಸ್–9/191/2020–21 ದಿನಾಂಕ: 15.12.2020.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 30.11.2020 ಹಾಗೂ 09.12.2020 ರಂದು ಜರುಗಿದ ಸಿಂಡಿಕೇಟ್ 9 ನೇ ಸಾಮಾನ್ಯ ಸಭೆಗಳ ನಡಾವಳಿಗಳು.**

***

ದಿನಾಂಕ: 30.11.2020 ಹಾಗೂ 09.12.2020 ರಂದು ಪೂರ್ವಾಹ್ನ 10–30 ಗಂಟೆಗೆ ಜರುಗಿದ ಸಿಂಡಿಕೇಟ್ 9 ನೇ ಸಾಮಾನ್ಯ ಸಭೆಗಳ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್-9/91/2020-21 ದಿನಾಂಕ: 15.12.2020

ದಿನಾಂಕ 30.11.2020 ಹಾಗೂ 09.12.2020 ರಂದು ಪೂರ್ವಾಹ್ನ 10.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 9 ನೇ ಸಾಮಾನ್ಯ ಸಭೆಯ ನಡಾವಳಿಗಳು.

**ದಿನಾಂಕ 30.11.2020 ರಂದು ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎನ್. ನರಸಿಂಹಮೂರ್ತಿ | ಸಭಾಧ್ಯಕ್ಷರು |
| 2. | ಡಾ: ಹೆಚ್. ಟಿ. ಅರವಿಂದ್ | ಸದಸ್ಯರು |
| 3. | ಶ್ರೀ ಹೆಚ್. ಆರ್. ಸತೀಶ್ | ಸದಸ್ಯರು |
| 4. | ಪ್ರೊ. ಕೆ. ರಮೇಶ್ | ಸದಸ್ಯರು |
| 5. | ಡಾ: ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 6. | ಡಾ: ಪಿ.ವಿ. ಪದ್ಮಜಾ | ಸದಸ್ಯರು |
| 7. | ಶ್ರೀ ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 8. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 9. | ಶ್ರೀ ಹೆಚ್. ಎನ್. ಹರಿಪ್ರಸಾದ್ | ಸದಸ್ಯರು |
| 10. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 11. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 12. | ಡಾ: ಆರ್.ಕೆ. ಚಂದ್ರನಾಥ್ | ಸದಸ್ಯರು |
| 13. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 14. | ಪ್ರೊ: ಬಿ. ರಮೇಶ್ ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 15. | ಶ್ರೀಮತಿ ಆರತಿ ಆನಂದ್, ಕೆ.ಎ.ಎಸ್ (ಹಿರಿಯ ಶ್ರೇಣಿ) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ ಕುಲಸಚಿವರು (ಮೌಲ್ಯಮಾಪನ) ರವರು ಎಲ್ಲಾ ಸದಸ್ಯರನ್ನು ಸ್ವಾಗತಿಸಿ, ಕರ್ನಾಟಕ ರಾಜ್ಯಪಾಲರ ಸಚಿವಾಲಯ ಅಧಿಸೂಚನೆ ಮೇರೆಗೆ ಹೊಸದಾಗಿ ಪ್ರಭಾರ ಕುಲಪತಿಗಳಾಗಿ ದಿನಾಂಕ 20.11.2020 ರಂದು ಅಧಿಕಾರವಹಿಸಿಕೊಂಡ ಡಾ.ಎನ್. ನರಸಿಂಹಮೂರ್ತಿ, ಡೀನರು ಕಲಾ ನಿಕಾಯ ಅವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು. ಹಾಗೂ ಕರ್ನಾಟಕ ಸರ್ಕಾರದ ಅಧಿಸೂಚನೆ ಪ್ರಕಾರ ದಿನಾಂಕ 26.11.2020 ರಂದು ಕುಲಸಚಿವರಾಗಿ ಅಧಿಕಾರ ವಹಿಸಿಕೊಂಡ ಶ್ರೀಮತಿ ಆರತಿ ಆನಂದ್. ಕೆ.ಎ.ಎಸ್ (ಹಿರಿಯ ಶ್ರೇಣಿ) ಅವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.ನೂತನ ಕುಲಪತಿಗಳು ಹಾಗೂ ಕುಲಸಚಿವರಿಗೆ ಸದಸ್ಯರು ಅಭಿನಂದನೆಗಳನ್ನು ತಿಳಿಸಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಕುಲಪತಿಗಳು, ಸಭೆ ಜರುಗಿಸಲು ಸದಸ್ಯರ ಸಹಕಾರ ಕೋರಿ, ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಯಿಂದ ನಿವೃತ್ತಿ ಹೊಂದಿದ ಪ್ರೊ. ಎಸ್. ಜಾಫೆಟ್ ಅವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ಅವರ ಸೇವೆಯನ್ನು ದಾಖಲಿಸಲಾಗುವುದೆಂದು ತಿಳಿಸಿದರು.

ಅದರಂತೆ, ಕುಲಸಚಿವರಾಗಿ ಸೇವೆ ಸಲ್ಲಿಸಿ ವರ್ಗಾವಣೆ ಹೊಂದಿದ ಶ್ರೀ ಪಿ.ಕುಮಾರ್ ರವರಿಗೂ ಹಾಗೂ ಅವರ ನಂತರ ಸೇವೆ ಸಲ್ಲಿಸಿದ ಡಾ. ವಿ. ಶಿವರಾಂ, ಕುಲಸಚಿವರ ಹುದ್ದೆಯಿಂದ ಬಿಡುಗಡೆ ಹೊಂದಿ ಅವರ ಸೇವೆಯನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪ್ರತ್ಯಾವರ್ತಿಸಿರುವುದನ್ನು ಸಭೆಗೆ ತಿಳಿಸಿ ಅವರು ವಿಶ್ವವಿದ್ಯಾನಿಲಯಕ್ಕೆ ನೀಡಿದ ಸೇವೆಯನ್ನು ಶ್ಲಾಘಿಸಿ ದಾಖಲಿಸಲಾಗುವುದೆಂದು ತಿಳಿಸಿದರು.

ಸಿಂಡಿಕೇಟ್ ಸದಸ್ಯತ್ವದ ಅವಧಿ ಪೂರ್ಣಗೊಳಿಸಿರುವ ಪ್ರೊ.ಎಂ.ಪಾಂಡುರಂಗಪ್ಪ, ಡೀನರು ವಿಜ್ಞಾನ ನಿಕಾಯ, ಪ್ರೊ. ವಿ.ಆರ್.ದೇವರಾಜ್, ಪ್ರಾಧ್ಯಾಪಕರು, ಜೀವರಸಾಯನ ಶಾಸ್ತ್ರ ವಿಭಾಗ ಹಾಗೂ ಪ್ರಾಂಶುಪಾಲರಾದ ಡಾ. ಬಿ. ಎ. ಅನುರಾಧಾ, ಡಾ. ಆರ್.ಪಾರ್ವತಿ, ಡಾ.ಇ. ಬಿ.ರಾಜೇಶ್ ಹಾಗೂ ಪ್ರೊ. ಶ್ರೀನಿವಾಸ್‌ಮೂರ್ತಿಯವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಗುವುದಾಗಿ ತಿಳಿಸಿದರು.

ನಂತರ ಕುಲಸಚಿವರಾದ ಶ್ರೀಮತಿ ಆರತಿ ಆನಂದ್ ರವರು, ತಮ್ಮನ್ನು ಸಭೆಗೆ ಪರಿಚಯಿಸಿ, ತಾವು ನಿರ್ವಹಿಸಿದ ವಿವಿಧ ಹುದ್ದೆ ಹಾಗೂ ಜವಾಬ್ದಾರಿಗಳ ಕುರಿತು ತಿಳಿಸಿ ತಮ್ಮ ಕಾರ್ಯ ನಿರ್ವಹಣೆಯಲ್ಲಿ ಎಲ್ಲಾ ಸದಸ್ಯರ ಸಹಕಾರ ಕೋರಿದರು.ತಾವು ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದು, ಸರ್ಕಾರ ಈ ವಿಶ್ವವಿದ್ಯಾನಿಲಯದಲ್ಲಿ ಒಳ್ಳೆಯ ಸೇವೆ ಸಲ್ಲಿಸಲು ಅವಕಾಶ ನೀಡಿದೆ.ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ವಿಶ್ವವಿದ್ಯಾನಿಲಯವನ್ನು ಸಮರ್ಪಕವಾಗಿ ನಡೆಸಿಕೊಂಡು ಹೋಗಲು ಸದಸ್ಯರ ಸಹಾಯ ಮತ್ತು ಸಹಕಾರವನ್ನು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಮಾತನಾಡಿ ವಿಶ್ವವಿದ್ಯಾನಿಲಯಗಳ ಕಾರ್ಯ ನಿರ್ವಹಣೆಯ ಮಾಹಿತಿ ಕುಲಸಚಿವರಿಗೆ ಇದೆ ಎಂದು ತಿಳಿಸಿ, ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಕಾರ್ಯ ನಿರ್ವಹಿಸಲು ಕೋರಿದರು. ಕುಲಸಚಿವರಕಾರ್ಯ ನಿರ್ವಹಣೆಯಲ್ಲಿ ಎಲ್ಲಾ ಸದಸ್ಯರ ಸಹಕಾರ ಇದೆ ಎಂದು ಹೇಳಿದರು. ಇಲ್ಲಿ ಬಹಳ ವ್ಯವಸ್ಥೆಗಳು ಆಗಬೇಕಾಗಿದೆ, ಆ ದಿಸೆಯಲ್ಲಿ ಕ್ರಮ ವಹಿಸಬೇಕೆಂದು ಹೇಳಿದರು.

ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

ವಿಷಯ ಸಂಖ್ಯೆ–1

**ದಿನಾಂಕ 27.08.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ಮತ್ತು ದಿನಾಂಕ 29.08.2020 & 11.09.2020 ರಂದು ಜರುಗಿದ 8ನೇ ಸಿಂಡಿಕೇಟ್ ಸಾಮಾನ್ಯ ಸಭೆಗಳ ಹಾಗೂ ದಿನಾಂಕ 30.09.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯು ನಡಾವಳಿಗಳನ್ನು ಧೃಢೀಕರಿಸುವ ಕುರಿತು**

ಸಿಂಡಿಕೇಟ್ ನಿರ್ಣಯ:

**ದಿನಾಂಕ 27.08.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ಮತ್ತು ದಿನಾಂಕ. 29.08.2020 & 11.09.2020 ರಂದು ಜರುಗಿದ 8ನೇ ಸಿಂಡಿಕೇಟ್ ಸಾಮಾನ್ಯ ಸಭೆಗಳ ಹಾಗೂ ದಿನಾಂಕ 30.09.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಬಯ ನಡಾವಳಿಗಳನ್ನು ಧೃಢೀಕರಿಸಲು ಸಭೆ ತೀರ್ಮಾನಿಸಿತು.**

ವಿಷಯ ಸಂಖ್ಯೆ–2

**ದಿನಾಂಕ 27.08.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ಮತ್ತು ದಿನಾಂಕ. 29.08.2020 & 11.09.2020 ರಂದು ಜರುಗಿದ 8ನೇ ಸಿಂಡಿಕೇಟ್ ಸಾಮಾನ್ಯ ಸಭೆಗಳ ಹಾಗೂ ದಿನಾಂಕ 30.09.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮಗಳ ವರದಿ**

ದಿನಾಂಕ 27.08.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ಮತ್ತು ದಿನಾಂಕ 29.08.2020 & 11.09.2020 ರಂದು ಜರುಗಿದ 8ನೇ ಸಿಂಡಿಕೇಟ್ ಸಾಮಾನ್ಯ ಸಭೆಗಳ ಹಾಗೂ ದಿನಾಂಕ 30.09.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳ ಮೇಲೆ ಕೈಕೊಂಡ ಕ್ರಮಗಳ ವರದಿಗಳ ಕುರಿತು ಪೂರ್ಣ ವಿವರಗಳನ್ನು ಒದಗಿಸಿಲ್ಲ ಎಂದು ಕೆಲವು ಸದಸ್ಯರು ತಿಳಿಸಿದ ಹಿನ್ನೆಲೆಯಲ್ಲಿ ನಡಾವಳಿಗಳ ಮೇಲೆ ಕೈಕೊಂಡ ವರದಿಯನ್ನು ಅಗತ್ಯ ವಿವರಗಳೊಂದಿಗೆ ಸಿದ್ಧಪಡಿಸಿ ಮುಂದಿನ ಸಿಂಡಿಕೇಟ್ ಸಭೆಗೆ ಒದಗಿಸಲಾಗುವುದು ಎಂದು ಕುಲಪತಿಗಳು ಸಭೆಗೆ ತಿಳಿಸಿದರು.

**ವಿಷಯ ಸಂಖ್ಯೆ-3**

**ದಿನಾಂಕ 09.09.2020 ರಂದು ಜರುಗಿದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎರಡನೇ ಕೇಂದ್ರ ಖರೀದಿ ಸಮಿತಿ ಸಭೆಯ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು**

ಕೆಲವು ಸದಸ್ಯರು ಈ ಕುರಿತು ಸಿಂಡಿಕೇಟ್ ಸ್ಥಾಯಿ ಸಮಿತಿಗಳನ್ನು ರಚಿಸಲಾಗಿದ್ದು ಆ ಸಮಿತಿ ಪರಿಶೀಲಿಸಿದ ನಂತರ ಸಲ್ಲಿಸಬೇಕೆಂದು ಹೇಳಿದರು. ಕುಲಪತಿಗಳು ವಿವರಣೆ ನೀಡಿ, ಕೇಂದ್ರೀಯ ಖರೀದಿ ಸಮಿತಿ ಶಾಸನಾತ್ಮಕ ಸಮಿತಿಯಾಗಿದ್ದು, ಸಿಂಡಿಕೇಟ್ ಸದಸ್ಯರೊಬ್ಬರು ಖರೀದಿ ಸಮಿತಿಯ ಸದಸ್ಯರಾಗಿರುತ್ತಾರೆ. ಆದಕಾರಣ ನಡಾವಳಿಗಳನ್ನು ಪರಿಗಣಿಸಬಹುದೆಂದು ಹೇಳಿದರು. ಮಾನ್ಯ ಸದಸ್ಯರಾದ ಶ್ರೀ ಹೆಚ್. ಆರ್. ಸತೀಶ್ ರವರು ಮಾತನಾಡಿ ಸ್ಥಾಯಿ ಸಮಿತಿಯ ಉದ್ದೇಶ ಪ್ರಮುಖವಾದ ವಿಷಯಗಳ ಕುರಿತು ಕೂಲಂಕಷವಾಗಿ ಚರ್ಚಿಸಿ ನಂತರ ಆಯಾ ಖರೀದಿ ಅಥವಾ ಕಾಮಗಾರಿ ಇತ್ಯಾದಿ ಸಮಿತಿಗಳು ಪರಿಶೀಲನೆಗೆ ಮಂಡಿಸಿ ಅವುಗಳ ಶಿಫಾರಸ್ಸುಗಳನ್ನು ಸಿಂಡಿಕೇಟ್‌ಗೆ ಸಲ್ಲಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ್ ಅವರು ಕೇಂದ್ರಿಯ ಖರೀದಿ ಸಮಿತಿ ಶಾಸನಾತ್ಮಕ ಸಮಿತಿಯಾಗಿದ್ದು, ಕಾರ್ಯಸೂಚಿಯ ಪ್ರಕಾರ ಪರಿಗಣಿಸಬಹುದು ಅಥವಾ ಅಗತ್ಯವಿದ್ದಲ್ಲಿ ಕೆಲವು ವಿಷಯಗಳನ್ನು ಖರೀದಿ ಸಮಿತಿ ಪುನರ್ ಪರಿಶೀಲನೆಗೆ ಮರಳಿಸಬಹುದು ಈ ಹಂತದಲ್ಲಿ ಕಾರ್ಯಸೂಚಿಯಲ್ಲಿ ಇರುವುದನ್ನು ಮರಳಿ ಸ್ಥಾಯಿ ಸಮಿತಿಗೆ ಕಳುಹಿಸುವುದು ಸೂಕ್ತವಲ್ಲ, ಮುಂದಿನ ದಿನಗಳಲ್ಲಿ ಈ ಕುರಿತು ಶಾಸನಾತ್ಮಕ ಸಮಿತಿಗಳು ಪರಿಗಣಿಸುವ ಪೂರ್ವದಲ್ಲಿ ಸ್ಥಾಯಿ ಸಮಿತಿ ಪರಿಗಣನೆಗೆ ಕಳುಹಿಸಬಹುದು ಎಂದು ಹೇಳಿದರು.

ಮಾನ್ಯ ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್ ರವರು ಕೇಂದ್ರಿಯ ಖರೀದಿ ಸಮಿತಿಯ ಕಾರ್ಯಸೂಚಿಯಲ್ಲಿರುವ ವಿಷಯಗಳ ಕುರಿತು ಸಭೆಗೆ ಸ್ಪಷ್ಟನೆ ನೀಡಿದರು ಹಾಗೂ 2ನೇ ಸಭೆಯಲ್ಲಿ ಮಾಡಿದ ಶಿಫಾರಸ್ಸುಗಳು ಸ್ಥಾಯಿ ಸಮಿತಿ ರಚನೆಯ ಪೂರ್ವದಲ್ಲಿ ಆಗಿವೆ ಎಂದು ಹೇಳಿದರು. ಸ್ಥಾಯಿ ಸಮಿತಿ ಸಲಹೆ ನೀಡುವ ಸಮಿತಿಯಾಗಿದ್ದು, ಇದು ಶಾಸನಾತ್ಮಕ ಸಮಿತಿಯಲ್ಲ ಎಂದು ಹೇಳಿದರು. ಸದ್ಯಕ್ಕೆ ಸ್ಥಾಯಿ ಸಮಿತಿ ಸಲಹೆಗಳನ್ನು ನೀಡಬಹುದು. ಮುಂದೆ ಅಗತ್ಯವಾದಲ್ಲಿ ಈ ಕುರಿತು ಶಾಸನ ರಚಿಸುವ ಅಧಿಕಾರ ಸಿಂಡಿಕೇಟ್‌ಗೆ ಇದೆ ಎಂದು ಸದಸ್ಯರಾದ ಶ್ರೀ ಕರಣ್‌ಕುಮಾರ್ ಹಾಗೂ ಶ್ರೀಮತಿ ಜ್ಯೋತಿ ವಿಜಯ್ ಹೇಳಿದರು.

ಚರ್ಚೆಯ ನಂತರ ದಿನಾಂಕ 09.09.2020 ಹಾಗೂ 27.11.2020 ರಂದು ಜರುಗಿದ ಕೇಂದ್ರ ಖರೀದಿ ಸಮಿತಿ ನಡಾವಳಿಗಳನ್ನು ವಿವರವಾಗಿ ಪರಿಶೀಲಿಸಿ ಕೆಳಗಿನಂತೆ ತೀರ್ಮಾನಿಸಲಾಯಿತು.

**ದಿನಾಂಕ 09.09.2020 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡಾವಳಿಗಳು:**

**01** (ಅ) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಅಲ್ಪಾವಧಿ ಟೆಂಡರ್‌ನಲ್ಲಿ ಕ್ರೀಡಾ ಕಿಟ್‌ಗಳನ್ನು (Sports kit) ಖರೀದಿಸುವ ಬಗ್ಗೆ

ಸಿಂಡಿಕೇಟ್ ನಿರ್ಣಯ

1) ಖರೀದಿ ಸಮಿತಿ ಸಭೆಯ ಅನುಮೋದನೆಯಂತೆ ಮರು ಟೆಂಡರ್ ಕರೆಯಲು ಅನುಮೋದಿಸಲಾಯಿತು.

2) ಮಾದರಿಗಳನ್ನು ಪರೀಕ್ಷೆ ಮಾಡಲು ತಗಲುವ ವೆಚ್ಚ ರೂ. 55,991/- (ಐವತ್ತೈದು ಸಾವಿರದ ಒಂಬತ್ತು ನೂರ ತೊಂಬತ್ತೊಂದು ರೂಪಾಯಿ) ಗಳನ್ನು ಪಾವತಿಸಲು ಅನುಮೋದನೆ ನೀಡಲಾಯಿತು.

3) ಸದಸ್ಯರು ಕೇಳಿದ **Sample Testing** ಕುರಿತು ವಿವರಗಳನ್ನು ನೀಡಲಾಯಿತು. ಇನ್ನು ಮುಂದೆ, ಖರೀದಿ ಸಮಿತಿ ನಡಾವಳಿಗಳೊಂದಿಗೆ ಪ್ರತಿಯೊಂದು ವಿಷಯಕ್ಕೆ ಪೂರಕ ವಿವರ ಹಾಗೂ ದಾಖಲೆಗಳನ್ನು ನೀಡಬೇಕೆಂದು ಸೂಚಿಸಲಾಯಿತು. ಮಾದರಿ ಪರೀಕ್ಷೆಯ ಧೃಢೀಕರಣ ಪತ್ರವನ್ನು ಒದಗಿಸುವಂತೆ ಟೆಂಡರ್ ಕರೆಯುವ ಸಮಯದಲ್ಲಿ ನಿಬಂಧನೆ ವಿಧಿಸಲು ಸೂಚಿಸಲಾಯಿತು.

**01** (ಆ) ಕರ್ನಾಟಕ ರಾಜ್ಯ ಸಾರ್ವಜನಿಕ ರಕ್ಷಣಾ ಕಾನೂನು 2018 ರಡಿಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜ್ಞಾನಜೋತಿ ಸಭಾಂಗಣಕ್ಕೆ ಸಂಬಂಧಿಸಿದಂತೆ CCTV, Access Control, X-ray baggage scanner ಮತ್ತು Door frame metal detector ಇತ್ಯಾದಿಗಳನ್ನು ಖರೀದಿಸಿ ಅಳವಡಿಸುವ ಬಗ್ಗೆ.

ಕುಲಪತಿಗಳನ್ನು ಪ್ರಸ್ತಾವನೆಯನ್ನು ವಿವರಿಸಿದರು. ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಎಲ್ಲಿ ಸಾಧ್ಯವೊ ಅಲ್ಲಿ, GEM Portal ಮುಖಾಂತರ ಖರೀದಿ ಪ್ರಕ್ರಿಯೆ ಜರುಗಿಸುವುದನ್ನು ಪರಿಗಣಿಸಬೇಕು. ಈ Portal ನಲ್ಲಿ ಖರೀದಿಸಲು ಯಾವುದೇ ಮಿತಿ ಇರುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಮಾನ್ಯ ಸದಸ್ಯರಾದ ಶ್ರೀ ಥಾಮಸ್ ನೀಲಿಯಾರ ರವರು, GEM ಹಾಗೂ KEONICS ನವರ ದರಗಳನ್ನು ತುಲನೆಮಾಡಿ ಯಾವುದು ಕಡಿಮೆ ಇದೆಯೋ ಅಲ್ಲಿ ಖರೀದಿಸುವುದು ಉತ್ತಮವೆಂದು ಹೇಳಿದರು.

ಕುಲಸಚಿವರು ಈ ಕುರಿತು ವಿವರಿಸಿ, configuration ಗಳ ಆಧಾರದ ಮೇಲೆ, GEM Portal ನಲ್ಲಿ ಲಭ್ಯವಿರುವ ಸಾಮಗ್ರಿಗಳ ದರಗಳನ್ನು ತುಲನೆ ಮಾಡಿ ಖರೀದಿಸಲು ಕ್ರಮ ಕೈಕೊಳ್ಳವುದಾಗಿ ತಿಳಿಸಿದರು.

ಶ್ರೀ ಕರಣ್‌ಕುಮಾರ್ ಮತ್ತು ಶ್ರೀಮತಿ ಜ್ಯೋತಿ ವಿಜಯ್ ಅವರು ಮಾತನಾಡಿ ವಿಶ್ವವಿದ್ಯಾಲಯದ ಮಾಸ್ಟರ್ ಪ್ಲಾನ್ ಅನ್ನು ಗಮನದಲ್ಲಿಟ್ಟುಕೊಂಡು ಈ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿದ ನಂತರ ಸಿಂಡಿಕೇಟ್‌ನಲ್ಲಿ ಮಂಡಿಸಲು ತಿಳಿಸಿದರು.

ಸಿಂಡಿಕೇಟ್ ನಿರ್ಣಯ

ಖರೀದಿ ಸಮಿತಿಯ ತೀರ್ಮಾನದಂತೆ, **KEONICS** ಸಂಸ್ಥೆಗೆ ನೀಡಿದ ಖರೀದಿ ಆದೇಶವನ್ನು ರದ್ದು ಪಡಿಸಲು ಹಾಗೂ ಈ ಪ್ರಸ್ತಾವನೆಯನ್ನು ಸಂಬಂಧಿಸಿದ ಸ್ಥಾಯಿ ಸಮಿತಿ ಪರಿಶೀಲಿಸಿ, ಮಾಸ್ಟರ್ ಪ್ಲಾನ್ ಜೊತೆಗೆ ಚರ್ಚೆಮಾಡಿ ಪುನಃ ಖರೀದಿ ಸಮಿತಿ ಹಾಗೂ ನಂತರ ಸಿಂಡಿಕೇಟ್ ಸಭೆಗಳ ಪರಿಶೀಲನೆಗೆ ಮಂಡಿಸಬೇಕೆಂದು ತೀರ್ಮಾನಿಸಲಾಯಿತು.

01 (ಇ) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮೂಹ ಸಂವಹನ, ಗಣಿತಶಾಸ್ತ್ರ, ಭೌತಶಾಸ್ತ್ರ ಹಾಗೂ ಜೀವ-ವಿಜ್ಞಾನ ವಿಭಾಗಗಳಿಗೆ ಕಂಪ್ಯೂಟರ್ಸ್, ಪ್ರಿಂಟರ್ಸ್‌ಗಳನ್ನು ಹಾಗೂ UPS ಗಳನ್ನು ಒದಗಿಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ

**KEONICS** ಸಂಸ್ಥೆಯವರು ಆದೇಶ ನೀಡಿದ ಸಾಮಾಗ್ರಿಗಳನ್ನು ಸರಬರಾಜು ಮಾಡಿರುತ್ತಾರೆ ಹಾಗೂ ಇದಕ್ಕೆ ಸಂಬಂಧಿಸಿದ ಬಿಲ್ಲು ಪಾವತಿ ಮಾಡಲಾಗಿದೆ ಎಂದು ಸಭೆಗೆ ಕುಲಪತಿಗಳು ತಿಳಿಸಿದರು. ಕಾರಣ ಕೈಕೊಂಡ ಕ್ರಮಕ್ಕೆ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.

01 (ಈ) ಒಂದು ಡೆಸ್ಕ್‌ಟಾಪ್, ಒಂದು ಪ್ರಿಂಟರ್ ಹಾಗೂ ಒಂದು ಜೆರಾಕ್ಸ್ ಯಂತ್ರಗಳನ್ನು ಸಮೂಹ ಸಂವಹನ ವಿಭಾಗದಲ್ಲಿನ ಬಳಕೆಗಾಗಿ ಮೆ: ಕಿಯೋನಿಕ್ಸ್ ಸಂಸ್ಥೆಯಿಂದ ಖರೀದಿಸಲಾದ ಬಾಬ್ತು ಘಟನೋತ್ತರ ಅನುಮೋದನೆ ಕುರಿತು.

ಸಿಂಡಿಕೇಟ್ ನಿರ್ಣಯ:

ಈ ಖರೀದಿ ಪ್ರಕ್ರಿಯೆ ಕೇಂದ್ರೀಯ ಖರೀದಿ ಸಮಿತಿ ರಚನೆಯ ಪೂರ್ವದಲ್ಲಿ ನಡೆದಿರುವ ಕಾರಣ ಖರೀದಿ ಸಮಿತಿಯ ವ್ಯಾಪ್ತಿಯಲ್ಲಿ ಬರದೆ ಇರುವುದರಿಂದ ಈಗಾಗಲೇ ಹಿಂದಿನ ಅಧಿಕಾರಿಗಳು ಖರೀದಿ ಮಾಡಿರುವುದರಿಂದ ಮುಂದೆ ಏನಾದರು ಆಕ್ಷೇಪಣೆ ಬಂದಲ್ಲಿ ಅವರು ಜವಾಬ್ದಾರರಾಗುತ್ತಾರೆ ಎಂದು ಸೂಚಿಸಿ ಅನುಮೋದಿಸಲಾಯಿತು.

01 (ಉ) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕಛೇರಿಗಳಿಗೆ ತುರ್ತಾಗಿ ದರಪಟ್ಟಿ ಕರೆದು ಸ್ಟೇಷನರಿ ಸಾಮಗ್ರಿಗಳನ್ನು ಪೂರೈಸಿರುವ ಬಾಬ್ತು ಹಾಗೂ ಸದರಿ ಸಾಮಗ್ರಿಗಳಿಗೆ ಘಟನೋತ್ತರ ಅನುಮೋದನೆ ಕುರಿತು.

ಸಿಂಡಿಕೇಟ್ ನಿರ್ಣಯ:

ಈ ಖರೀದಿ ಪ್ರಕ್ರಿಯೆ ಕೇಂದ್ರೀಯ ಖರೀದಿ ಸಮಿತಿ ರಚನೆಯ ಪೂರ್ವದಲ್ಲಿ ನಡೆದಿರುವ ಕಾರಣ ಖರೀದಿ ಸಮಿತಿಯ ವ್ಯಾಪ್ತಿಯಲ್ಲಿ ಬರದೆ ಇರುವುದರಿಂದ ಈಗಾಗಲೇ ಹಿಂದಿನ ಅಧಿಕಾರಿಗಳು ಖರೀದಿ ಮಾಡಿರುವುದರಿಂದ ಮುಂದೆ ಏನಾದರು ಆಕ್ಷೇಪಣೆ ಬಂದಲ್ಲಿ ಅವರು ಜವಾಬ್ದಾರರಾಗುತ್ತಾರೆ ಎಂದು ಸೂಚಿಸಿ ಅನುಮೋದಿಸಲಾಯಿತು

01 (ಊ) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವಿಭಾಗಕ್ಕೆ ಒಂದು ಹೆವಿಡ್ಯೂಟಿ ಜೆರಾಕ್ಸ್ ಯಂತ್ರವನ್ನು ಒದಗಿಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ಪ್ರಸ್ತಾವನೆಯನ್ನು ಕೈಬಿಡಲಾಯಿತು

02) ಗಣಿತ ವಿಭಾಗಕ್ಕೆ SERB ಸ್ಕೀಮ್‌ನಡಿಯಲ್ಲಿ "Apple Mac Book Pro MLUQZHN/A Ultra Book Core i5 6th Gen/2.0 Ghz/64-bit/8GB/1TB SSD/Mac OS Sierra ಸ್ಪೆಸಿಫಿಕೇಷನ್ ಉಳ್ಳ 01 ಲ್ಯಾಪ್ ಟಾಪ್ ಖರೀದಿಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ಖರೀದಿ ಸಮಿತಿ ಸಭೆಯ ತೀರ್ಮಾನವನ್ನು ಅನುಮೋದಿಸಲಾಯಿತು.

03) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗಕ್ಕೆ ಜೆರಾಕ್ಸ್ ಯಂತ್ರವನ್ನು ಖರೀದಿಸುವ ಸಂಬಂಧ.

ಸಿಂಡಿಕೇಟ್ ನಿರ್ಣಯ:

ಒಂದು ಲಕ್ಷ ಮೊತ್ತದ ಮಿತಿಯೊಳಗೆ ಜೆರಾಕ್ಸ್ ಯಂತ್ರ ಖರೀದಿಸಲು ಅನುಮೋದನೆ ನೀಡಲಾಯಿತು

04) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಖಾಲಿ ಉತ್ತರ ಪತ್ರಿಕೆಗಳನ್ನು ಟೆಂಡರ್ ಮೂಲಕ ಖರೀದಿಸಿರುವ ಬಗ್ಗೆ.

ಕುಲಸಚಿವರು (ಮೌಲ್ಯಮಾಪನ) ರವರು ಉತ್ತರ ಪತ್ರಿಕೆಗಳ ಮುದ್ರಣ ಕುರಿತು ವಿವರಗಳನ್ನು ಸಭೆಗೆ ವಿವರಿಸಿದರು. ಟೆಂಡರ್ ಪ್ರಕ್ರಿಯೆ ಜರುಗಿಸಿರುವುದಕ್ಕೆ ಘಟನೋತ್ತರ ಅನುಮೋದನೆ ಹಾಗೂ ರೂ. 9.00 ಲಕ್ಷ ಮೊತ್ತದ ಪಾವತಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಕುರಿತು ಮಾನ್ಯ ಸದಸ್ಯರಾದ ಡಾ. ಹೆಚ್. ಟಿ. ಅರವಿಂದ್ ರವರು ಹಣ ಪಾವತಿಯ ಬಗ್ಗೆ ಸಂಬಂಧಿಸಿರುವ ಪ್ರಸ್ತಾವನೆಯಲ್ಲಿ ಯಾವುದೇ ಪ್ರಸ್ತಾಪ ಇರುವುದಿಲ್ಲ. ಕಾರಣ ಆ ಕುರಿತು ಬೇರೊಂದು ಪ್ರಸ್ತಾವನೆ ಸಲ್ಲಿಸಬೇಕೆಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ

ಚರ್ಚೆಯ ನಂತರ ಪರೀಕ್ಷಾ ವಿಭಾಗಕ್ಕೆ ಅಗತ್ಯವಾದ ಉತ್ತರ ಪತ್ರಿಕೆಗಳನ್ನು ನಿಯಾಮವಳಿಗಳ ಪ್ರಕಾರ ಟೆಂಡರ್ ಮುಖಾಂತರ ಖರೀದಿಸಿರುವುದನ್ನು ಸಿಂಡಿಕೇಟ್ ಸಭೆ ಅನುಮೋದಿಸಿತು.

[

05) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆವರಣ ಹಾಗೂ ಎಲ್ಲಾ ಕಛೇರಿ/ವಿಭಾಗಗಳಿಗೆ ಸಿಸಿಟಿವಿ ವ್ಯವಸ್ಥೆ ಒದಗಿಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ಕೇಂದ್ರ ಖರೀದಿ ಸಮಿತಿ ತೀರ್ಮಾನದಂತೆ **GEM Portal** ಮುಖಾಂತರ ಖರೀದಿಸಲು ಹಾಗೂ ಇದಕ್ಕಾಗಿ ಆಯವ್ಯಯದಲ್ಲಿ ಅಗತ್ಯ ಹಣಕಾಸಿನ ಅವಕಾಶ ಕಲ್ಪಿಸಲು ಸಿಂಡಿಕೇಟ್ ಸಭೆ ಅನುಮೋದಿಸಿತು.

06) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲಾ ಕಛೇರಿ/ವಿಭಾಗಗಳಿಗೆ ದೂರವಾಣಿ / ಅಂತರ್ ಜಾಲ ವ್ಯವಸ್ಥೆ ಒದಗಿಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ಈ ಕುರಿತು ಅಗತ್ಯ ವಿವರಗಳನ್ನು ಕುಲಪತಿಗಳು ಸಭೆಗೆ ನೀಡಿದರು. ಸುಧೀರ್ಘ ಚರ್ಚೆಯ ನಂತರ ವಿಭಾಗಗಳ ಮುಖ್ಯಸ್ಥರಿಗೆ ಹಾಗೂ ಅಧಿಕಾರಿಗಳಿಗೆ ಅಧಿಕೃತವಾಗಿ ಒಂದು **Jio Mobile Phone** ನೀಡಬೇಕೆಂದು ಹಾಗೂ ಪ್ರತಿ ವಿಭಾಗ / ಕಛೇರಿಗೆ ಒಂದು **BSNL** ದೂರವಾಣಿ ಸಂಪರ್ಕ ನೀಡಲು ಸಭೆ ತೀರ್ಮಾನಿಸಿತು.

07) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ (NSS) ಕಛೇರಿಗೆ ಗಣಕಯಂತ್ರ, ಲ್ಯಾಪ್‌ಟಾಪ್,ಪ್ರಿಂಟರ್, ಪ್ರೊಜೆಕ್ಟರ್, ಪೀಠೋಪಕರಣಗಳು ಮತ್ತು 3 ಅಲ್ಮೇರಾಗಳನ್ನು ಖರೀದಿ ಮಾಡುವ ಬಗ್ಗೆ.

ಅಗತ್ಯವಾದ ಪೀಠೋಪಕರಣ ಹಾಗೂ ಗಣಕಯಂತ್ರ–ಪ್ರಿಂಟರ್ ಇತ್ಯಾದಿಗಳನ್ನು ಪಟ್ಟಿಮಾಡಿ ವಿಶ್ವವಿದ್ಯಾನಿಲಯಕ್ಕೆ ದೇಣಿಗೆ ನೀಡಲು ಮುಂದೆ ಬರುವ ಸಂಸ್ಥೆಗಳಿಗೆ ಸಂಪರ್ಕಿಸಬೇಕೆಂದು ಸದಸ್ಯರಾದ ಶ್ರೀ ಕರಣ್‌ಕುಮಾರ್‌ರವರು ಸಲಹೆ ನೀಡಿದರು.

ಸಿಂಡಿಕೇಟ್ ನಿರ್ಣಯ:

ಖರೀದಿ ಸಮಿತಿಯ ತೀರ್ಮಾನವನ್ನು ಅನುಮೋದಿಸಲಾಯಿತು.

ಆ) ದಿನಾಂಕ 27.11.2020 ರಂದು ಜರುಗಿದ ಖರೀದಿ ಸಮಿತಿ ನಡಾವಳಿಗಳ ಮೇಲೆ ಸಿಂಡಿಕೇಟ್ ತೀರ್ಮಾನಗಳು :

01) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜೀವಶಾಸ್ತ್ರ (ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ) ವಿಭಾಗಕ್ಕೆ **Lab Furnitures** ಖರೀದಿಸುವ ಬಗ್ಗೆ.

ಸಿಂಡಿಕೇಟ್ ತೀರ್ಮಾನ :

ಕೇಂದ್ರಿಯ ಖರೀದಿ ಸಮಿತಿಯ ತೀರ್ಮಾನವನ್ನು ಅನುಮೋದಿಸಲಾಯಿತು.

02) ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಹೊರಗುತ್ತಿಗೆ ಸ್ವಚ್ಛತಾ ಸಿಬ್ಬಂದಿಗಳ ನೇಮಕಾತಿಗಾಗಿ ಕರೆಯಲಾದ ತಾಂತ್ರಿಕ ಬಿಡ್‌ಗಳ ಪರಿಶೀಲನೆ ಹಾಗೂ ಅರ್ಹ ಬಿಡ್‌ದಾರರ ಅನುಮೋದನೆ ಕುರಿತು.

ಸಿಂಡಿಕೇಟ್ ತೀರ್ಮಾನ :

ಕೇಂದ್ರಿಯ ಖರೀದಿ ಸಮಿತಿಯ ತೀರ್ಮಾನವನ್ನು ಅನುಮೋದಿಸಲಾಯಿತು.

03) ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಹೊರಗುತ್ತಿಗೆ ಸಿಬ್ಬಂದಿಗಳ ನೇಮಕಾತಿಗಾಗಿ ಕರೆಯಲಾದ ತಾಂತ್ರಿಕ ಬಿಡ್‌ಗಳ ಪರಿಶೀಲನೆ ಹಾಗೂ ಅರ್ಹ ಬಿಡ್‌ದಾರರ ಅನುಮೋದನೆ ಕುರಿತು.

ಸಿಂಡಿಕೇಟ್ ತೀರ್ಮಾನ :

ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿರುವುದರಿಂದ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಕೇಂದ್ರಿಯ ಖರೀದಿ ಸಮಿತಿ ಮುಂದೆ ಮಂಡಿಸಿ ನಂತರ ಸಿಂಡಿಕೇಟ್ ಅನುಮೋದನೆಗೆ ಮಂಡಿಸಲು ತೀರ್ಮಾನಿಸಲಾಯಿತು.

04) ಕುಲಪತಿಗಳು ಹಾಗೂ ಕುಲಸಚಿವರು (ಆಡಳಿತ) ಇವರುಗಳ ಕಛೇರಿಗೆ ಪೀಠೋಪಕರಣಗಳನ್ನು **KTPP Act 1999 Section** 4(ರ) ರಡಿ ವಿನಾಯಿತಿ ಹೊಂದಿರುವ ಸಂಸ್ಥೆಗಳಿಂದ ಖರೀದಿಸುವ ಬಗ್ಗೆ.

ಸಿಂಡಿಕೇಟ್ ತೀರ್ಮಾನ :

ಕೇಂದ್ರಿಯ ಖರೀದಿ ಸಮಿತಿ ತೀರ್ಮಾನವನ್ನು ಅನುಮೋದಿಸಿ ಪ್ರಥಮ ಆದ್ಯತೆಯನ್ನು **GEM Portal** ಮುಖಾಂತರ ಖರೀದಿಸಬೇಕೆಂದು ಅಲ್ಲಿ ಅಗತ್ಯವಾದ ಪೀಠೋಪಕರಣ ಲಭ್ಯವಿಲ್ಲವಾದಲ್ಲಿ **KTPP Act** ಪ್ರಕಾರ ಖರೀದಿಸಬೇಕೆಂದು ತೀರ್ಮಾನಿಸಲಾಯಿತು.

05) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂವಹನಾ ವಿಭಾಗದಲ್ಲಿ Web Radio ಸ್ಥಾಪಿಸುವ ಬಗ್ಗೆ:

ಕುಲಪತಿಗಳು Web Radio ಕುರಿತು ವಿವರಗಳನ್ನು ಸಭೆಗೆ ಒದಗಿಸಿದರು. ಇದರಿಂದ ಸಂವಹನ ವಿಭಾಗದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅನುಭವವಾಗುತ್ತದೆ. ಅಲ್ಲದೆ ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳನ್ನು ಬಿತ್ತರಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಮಾತನಾಡಿ ಇದು ಒಂದು ಒಳ್ಳೆಯ ಯೋಜನೆ. Web Radio ಸಲುವಾಗಿ ಒಂದು Software ಇದ್ದು ಅದು OTP ಆಧಾರಿತವಾಗಿದೆ. ಈ ಯೋಜನೆಯನ್ನು ತಮಗೆ ತಿಳಿದಿರುವ ಒಂದು ಸಂಸ್ಥೆಗೆ ವಹಿಸಿಕೊಟ್ಟರೆ ಅವರು ಒಂದು ವರ್ಷದ ಅವಧಿಗೆ ಪ್ರಾಯೋಗಿಕವಾಗಿ ನಡೆಸಿಕೊಡುತ್ತಾರೆ. ಆದರ ನಿರ್ವಹಣೆ ಸರಿ ಎನಿಸಿದರೆ, ಹಾಗೂ ಅಗತ್ಯವಾದರೆ ಒಂದು ವರ್ಷದ ನಂತರ ಮುಂದುವರೆಯಲು ಯೋಚಿಸಬಹುದು. ಇದಕ್ಕಾಗಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಹಣಕಾಸಿನ ಬಾಧ್ಯತೆ ಇರುವುದಿಲ್ಲ ಎಂದು ಹೇಳಿದರು.

ಸಿಂಡಿಕೇಟ್ ನಿರ್ಣಯ:

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಪ್ರಸ್ತಾಪಿಸಿದಂತೆ, ಈ **Web Radio** ಪ್ರಾರಂಭಿಸಲು ಸೂಚಿಸುವ ಸಂಸ್ಥೆಗೆ ಒಂದು ವರ್ಷದ ಅವಧಿಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಹಣಕಾಸಿನ ಬಾಧ್ಯತೆ ಇಲ್ಲದೆ **Pilot** ಆಧಾರದ ಮೇಲೆ ವಹಿಸಿಕೊಡಲು ಹಾಗೂ ಇದಕ್ಕಾಗಿ ಒಂದು ಒಡಂಬಡಿಕೆ ಪತ್ರ (MoU) ಮಾಡಿಕೊಳ್ಳಬೇಕೆಂದು

ಸಿಂಡಿಕೇಟ್ ಸಭೆ ತೀರ್ಮಾನಿಸಿತು.

**06)** 2020–21 ಹಾಗೂ 2021–22 ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ತಯಾರಿಕೆ ಹಾಗೂ ದೃಢೀಕರಣ/ಪ್ರಮಾಣೀಕರಣಕ್ಕೆ ಕ್ರಮವಾಗಿ ಆಡಿಟರುಗಳು ಹಾಗೂ ಚಾರ್ಟರ್ಡ್ ಅಕೌಂಟೆಂಟ್‌ರವರುಗಳನ್ನು ತೆಗೆದುಕೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಕರೆಯಲು ಅನುಮೋದನೆ ಪಡೆಯುವ ಕುರಿತು.

ಸಿಂಡಿಕೇಟ್ ನಿರ್ಣಯ:

ಕೇಂದ್ರಿಯ ಖರೀದಿ ಸಮಿತಿ ಸಭೆಯ ತೀರ್ಮಾನವನ್ನು ಅನುಮೋದಿಸಲಾಯಿತು.

**07)** ಸಕ್ಷಮ ಪ್ರಾಧಿಕಾರವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಸೆಕ್ಷನ್ 4(e) (i) ಮತ್ತು (ii) ನ್ನು ತಿದ್ದುಪಡಿ ಮಾಡಿರುವಂತೆ ಬೆಂ.ನ.ವಿವಿಯು ಅಳವಡಿಸಿಕೊಳ್ಳುವ ಬಗ್ಗೆ.

KTPP ಅಧಿನಿಯಮಕ್ಕೆ ಮಾಡಲಾದ ತಿದ್ದುಪಡಿಗಳನ್ನು ಸಭೆಗೆ ಓದಿ ಹೇಳಿ ವಿವರಿಸಲಾಯಿತು. ಟೆಂಡರ್ ಕರೆದು 20–25 ಸರಬರಾಜುದಾರರನ್ನು ಸರಬರಾಜು ದಾರರ ಪಟ್ಟಿ ಮಾಡಿ ಆ ಪಟ್ಟಿಯಲ್ಲಿರುವ ಸಂಸ್ಥೆಗಳಿಂದ ದರ ಪಟ್ಟಿಗಳನ್ನು ಆಹ್ವಾನಿಸಬೇಕು ಎಂದು ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್, ಶ್ರೀ ಎಚ್. ಆರ್. ಸತೀಶ್ ಹಾಗೂ ಡಾ. ಆರ್. ಕೆ. ಚಂದ್ರನಾಥ್ ತಿಳಿಸಿದರು. ಕೆಲವು ವಿಭಾಗಗಳಿಗೆ ಅಗತ್ಯವಾದ specimen ಇತ್ಯಾದಿಗಳಿಗೆ ಕೆಲವು ಸರಬರಾಜುದಾರರು ಇದ್ದು, ಅಂತಹ ಸಂಸ್ಥೆಗಳ ವಿವರಗಳನ್ನು ವಿಭಾಗಗಳಿಂದ ಪಡೆದು ಅವುಗಳನ್ನು ಸಹ ಸರಬರಾಜು ದಾರರ ಪಟ್ಟಿ ಪಟ್ಟಿಯಲ್ಲಿ ಸೇರಿಸಬೇಕು. ಒಂದು ಸಲ ಸರಬರಾಜು ದಾರರ ಪಟ್ಟಿ ಆದ ಪಟ್ಟಿಯನ್ನು 2 ವರ್ಷಗಳ ಅವಧಿಗೆ ಜಾರಿಯಲ್ಲಿ ಇರಬೇಕು ಎಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ:

ಕೇಂದ್ರಿಯ ಖರೀದಿ ಸಮಿತಿಯ ತೀರ್ಮಾನವನ್ನು ಸಿಂಡಿಕೇಟ್ ಸಭೆ ಅನುಮೋದಿಸಿತು.

**08)** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲಾ ಕಛೇರಿ/ವಿಭಾಗಗಳಿಗೆ ಅಂತರ್ಜಾಲ (Internet) ವ್ಯವಸ್ಥೆ ಒದಗಿಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ಸದರಿ ಪ್ರಸ್ತಾವನೆಯನ್ನು ವಿಶ್ವವಿದ್ಯಾನಿಲಯದ ಮಾಸ್ಟರ್ ಪ್ಲಾನ್ ಸಿದ್ಧಪಡಿಸುವ ಕೆಲಸ ಪ್ರಗತಿಯಲ್ಲಿರುವುದನ್ನು ಗಮನದಲ್ಲಿ ಇಟ್ಟುಕೊಂಡು ಮತ್ತು ವಿಶ್ವವಿದ್ಯಾನಿಲಯಕ್ಕೆ ಅಂತರ್‌ಜಾಲದ ಅವಶ್ಯಕತೆ ಜರೂರು ಇರುವುದರಿಂದ ಸಿಂಡಿಕೇಟ್ ಸ್ಥಾಯಿ ಸಮಿತಿ ಮುಂದೆ ಮಂಡಿಸಿ ಚರ್ಚಿಸಿದ ನಂತರ ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಕ್ರಮವಹಿಸಬೇಕೆಂದು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ–4

**To consider the reply (representation) submitted by Charan's B.Ed College, Bengaluru in response to the Notice of Motion issued under Section 63(3) of the Karnataka State Universities Act, 2000 for withdrawal of affiliation.**

The Syndicate noted the facts of the case and reply submitted by Charan's B.Ed. College, Bengaluru. The fact remains that, the Charan's B.Ed. College does not have valid recognition of the NCTE as required under Section 14(3) of the NCTEAct, 1993 for the Academic year 2019-20 which wastheprerequisite for starting/continuing a B.Ed. College. However, to the university and the LIC committee that visited earlier, the College has submitted the Order No: SRO/NCTE/SRCPP 8585/B.Ed. /KA/2019/99196 dated 26.02.2019 of the NCTE granting recognition for starting of B.Ed. programmes of two-year duration at Charan's B.Ed. College, which is found to be a fake and fabricated. This was ascertained from Regional Director, National Council for Teacher Education (NCTE), vide its letter F No: NCTE-C/PG013/1/2109-O/o RD-SRC 104312 dated 7th May 2019 and also clarifiedby itsadditional letter F No:SRC/ NCTE/Comp/2020- O/o RD-SRC/16028 dated 17.03.2020.

Further, in response to the Notice of Motion served on Charan's B.Ed. College by the University as required under Section 63(3) of the Karnataka State Universities Act, 2000, the management of the College vide letter No: BCU/099/2020 dated 19.09.2020 inter alia has stated that, "We appeal to the Syndicate Members to view the whole matter in its 'ENTIRETY' as mistakes and overlooking procedures have happened at various levels leading to this UNFORTUNATE situation".

Hence, the explanation dated 19.09.2020 submitted by the College accepting the mistake does not require any further evidence which require to constitute a Committee for inspection in this behalf, as provided under Section 63(5) of the KSU Act, 2000.

Given the fact of falsification alone, the Syndicate is fully convinced beyond any iota of doubt, that the Recognition Order of the NCTE submitted to the University by Charan's B.Ed. College is not genuine and the same is fake and fabricated.

**Hence, the following RESOLUTION OF THE SYNDICATE:**

**The Syndicate unanimously resolved to withdraw the affiliation granted for B.Ed. programmes of two-year duration at Charan's B.Ed. College effective from the academic year 2019-20.**

**The Syndicate further resolved that the students admitted to Charan's B.Ed. College during 2019-20 (who are now in II-year B.Ed. Course) be accommodated in the nearby**

Colleges of their choice, as per Section 65(11) of the Act. As a stern measure, under the supervision of the university, entire fee collected from the students ever since academic year 2019-20 shall be transferred to the Colleges where the students are accommodated.

The decision of the Syndicate shall be placed before the Academic Council to record its opinion as required under several sections and provisions of the KSU Act, 2000.

ವಿಷಯ ಸಂಖ್ಯೆ-5

**Request from Institute for Social and Economic Change for Financial Support to the best 25 BA Course Meritorious Students under Social Sciences Talent Search Scheme (SSTSS)**

ಸಿಂಡಿಕೇಟ್ ನಿರ್ಣಯ

ಚರ್ಚೆಯ ನಂತರ ಹೆಚ್ಚಿನ ವಿವರಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ಸೂಚಿಸಲಾಯಿತು.

ವಿಷಯ ಸಂಖ್ಯೆ-6

ಶ್ರೀಮತಿ ಸುನೀತಾ ಸಿ.ವಿ, ಅಧೀಕ್ಷಕರು, ಪರೀಕ್ಷಾ ವಿಭಾಗ, ಅವರ ಸೇವೆಯನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹಿಂತಿರುಗಿಸುವ ಬಗ್ಗೆ

ಸಿಂಡಿಕೇಟ್ ನಿರ್ಣಯ

ಶ್ರೀಮತಿ ಸಿ. ವಿ. ಸುನಿತಾ ಅಧೀಕ್ಷಕರು, ಪರೀಕ್ಷಾ ವಿಭಾಗ ಇವರ ಕಾರ್ಯ ವೈಖರಿಯನ್ನು ಸುಧಾರಿಸಿ ಕೊಳ್ಳಲು ಅಂತಿಮ ಅವಕಾಶ ನೀಡಿ ಸುಧಾರಣೆ ಕಂಡು ಬರದಿದ್ದಲ್ಲಿ ಜನವರಿ 2021 ರ ಅಂತ್ಯಕ್ಕೆ ಅವರನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮರು ವರ್ಗಾವಣೆ ಮಾಡಲು ಕ್ರಮಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

ಸಿಬ್ಬಂದಿಗಳು ತಡವಾಗಿ ಕಛೇರಿ / ವಿಭಾಗಗಳಿಗೆ ಬರುವುದನ್ನು ಸಿಂಡಿಕೇಟ್ ಸಭೆ ಗಂಭೀರವಾಗಿ ಪರಿಗಣಿಸಿ, ಈ ಕುರಿತು ಎಲ್ಲಾ ಸಿಬ್ಬಂದಿಗಳು ಸಮಯಕ್ಕೆ ಸರಿಯಾಗಿ ಕಛೇರಿಗೆ / ವಿಭಾಗಕ್ಕೆ ಬರಲು ಸೂಚಿಸಿ ಒಂದು ಸುತ್ತೋಲೆ ಹೊರಡಿಸಬೇಕೆಂದು, ಹಾಗೂ ಸಿಬ್ಬಂದಿ / ಅಧ್ಯಾಪಕರ ಹಾಜರಾತಿಯನ್ನು ದಾಖಲಿಸಲು, ಬಯೋಮೆಟ್ರಿಕ್ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕೆಂದು ಸಭೆ ತೀರ್ಮಾನಿಸಿತು. ಕುಲಪತಿಗಳು / ಕುಲಸಚಿವರು ವಿಭಾಗಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಹಾಜರಾತಿ ಪರಿಶೀಲಿಸಬೇಕೆಂದು ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ–7

ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ವಿಭಾಗಗಳಲ್ಲಿ ಕಾರ್ಯನಿರ್ವಹಿಸಲು ಅಕ್ಟೋಬರ್ 2020 ರಲ್ಲಿ ಸೇವೆ ಪಡೆಯಲಾಗಿರುವ ವಿವಿಧ ವೃಂದದ ನೌಕರರ ಸೇವೆ ಪಡೆದು ಅವರಿಗೆ ಪಾವತಿಸುವ ಬಗ್ಗೆ.

ವಿವಿಧ ವೃಂದದ ನೌಕರರ ಸೇವೆ ಪಡೆಯಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು ಈ ಪ್ರಕ್ರಿಯೆ ಮುಗಿಯಲು ಕಾಲಾವಕಾಶದ ಅಗತ್ಯವಿದೆ ಎಂದು ಕುಲಪತಿಗಳು ಸಭೆಗೆ ತಿಳಿಸಿದರು. ಕಾರಣ ಜನವರಿ ಅಂತ್ಯದವರೆಗೆ ಕಾಲಾವಕಾಶ ನೀಡಬೇಕೆಂದು, ಈ ಅವಧಿಯಲ್ಲಿ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು, ಹಿಂದೆ ಕಿಯೋನಿಕ್ಸ್ ನವರಿಂದ ಸೇವೆ ಪಡೆಯಲು ಕ್ರಮ ಜರುಗಿಸಲಾಗಿದೆ ಅವರಿಂದ ಪ್ರಸ್ತಾವನೆ ಸಲ್ಲಿಕೆಯಾಗಿತ್ತು ಅದನ್ನು ಪರಿಗಣಿಸಬೇಕೆಂದು ಹೇಳಿದರು.

ಸಿಂಡಿಕೇಟ್ ನಿರ್ಣಯ

ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು 31.1.2021 ರವರೆಗೆ ಮುಂದುವರೆಸಲು, ತೀರ್ಮಾನಿಸಿ, ಈ ಅವಧಿಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಸೂಚಿಸಲಾಯಿತು. ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಕ್ರಮವಹಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ–8

ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿನ ಉದ್ಯಾನವನ ಹಾಗೂ ಸುತ್ತಮುತ್ತಲಿನ ರಸ್ತೆಗಳನ್ನು ಸ್ವಚ್ಛಗೊಳಿಸಲು ತೋಟಪಾಲಕರ ಸೇವೆಯನ್ನು ಪಡೆಯುವ ಬಗ್ಗೆ

ಸಿಂಡಿಕೇಟ್ ನಿರ್ಣಯ

ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು 31.1.2021 ರವರೆಗೆ ಮುಂದುವರೆಸಲು, ತೀರ್ಮಾನಿಸಿ, ಈ ಅವಧಿಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಸೂಚಿಸಲಾಯಿತು. ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಮತ್ತು ಈಗಾಗಲೇ ಸಿಂಡಿಕೇಟ್ ತೆಗೆದುಕೊಂಡಿರುವ ನಿರ್ಣಯದಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು

ವಿಷಯ ಸಂಖ್ಯೆ–9 ರಿಂದ 12

ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು.

ವಿಷಯ ಸಂಖ್ಯೆ–13

**Statutes Governing Cadre, Recruitment and Promotion of Non-Teaching Technical and Ministerial Staff in the Bengaluru City University, 2020** ಕರಡು ಪರಿನಿಯಮವನ್ನು ಪುನರ್ ಪರಿಗಣಿಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ

**The Syndicate resolved to approve the draft Statutes Governing Cadre, Recruitment and Promotion of Non-Teaching Technical and Ministerial Staff in the Bengaluru City University, 2020 incorporating the suggestions made in the Finance Committee in its meeting held on 19.08.2020**

ವಿಷಯ ಸಂಖ್ಯೆ–14 ರಿಂದ 18

ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು.

ವಿಷಯ ಸಂಖ್ಯೆ–19

**Enhancement of intake for Post Graduate courses in Bengaluru City University Departments in the Faculty of Arts.**

ಮಾನ್ಯ ಸದಸ್ಯರಾದ ಡಾ. ಹೆಚ್. ಟಿ. ಅರವಿಂದ್, ಶ್ರೀಮತಿ ಜ್ಯೋತಿ ವಿಜಯ್, ಶ್ರೀ ಕರಣ್‌ಕುಮಾರ್, ಡಾ. ಆರ್. ಕೆ. ಚಂದ್ರನಾಥ್, ಪ್ರೊ. ಕೆ. ರಮೇಶ್, ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ, ಶ್ರೀ ಎಂ. ಚಿಕ್ಕಮುನಿಯಪ್ಪ, ಡಾ. ಪಿ. ವಿ. ಪದ್ಮಜಾ ಹಾಗೂ ಡಾ. ಲಿಡಿಯಾ ಪಿ ಸ್ಯಾಮುಯೆಲ್ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡು, ಕಳೆದ ವರ್ಷ ಪ್ರವೇಶ ಪರೀಕ್ಷೆ ಮಾಡಿ ಸ್ನಾತಕೋತ್ತರ ವ್ಯಾಸಂಗಕ್ಕೆ ಪ್ರವೇಶ ನೀಡಲಾಗಿದ್ದು, ಈ ವರ್ಷ ಅದನ್ನು ತೆಗೆದು ಹಾಕಿರುವುದನ್ನು ಕುರಿತು ಚರ್ಚಿಸಿದರು. ಪ್ರವೇಶ ಪರೀಕ್ಷೆ ನಡೆಸುವುದರಿಂದ ಪ್ರತಿಭಾವಂತ ವಿದ್ಯಾರ್ಥಿಗಳ ಆಯ್ಕೆಗೆ ಅವಕಾಶವಾಗುತ್ತದೆ. ಸ್ನಾತಕೋತ್ತರ ವ್ಯಾಸಂಗಕ್ಕೆ ಬರುವ ವಿದ್ಯಾರ್ಥಿಗಳು ನಿಗದಿತ ಅರ್ಹತಾ ಮಟ್ಟ ಹೊಂದಿರಬೇಕಾಗಿರುವುದು ಅಗತ್ಯ. ಬೆಂಗಳೂರು ನಗರದಲ್ಲಿರುವ ವಿಶ್ವವಿದ್ಯಾಲಯವಾಗಿರುವುದರಿಂದ ನಾವು ಗುಣಮಟ್ಟವನ್ನು ಕಾಯ್ದುಕೊಂಡು ಹೋಗಬೇಕಾಗುತ್ತದೆ ಎಂದು ಹೇಳಿದರು.

ಡಾ. ಆರ್. ಕೆ. ಚಂದ್ರನಾಥ್‌ರವರು, ಚರ್ಚೆಯಲ್ಲಿ ಭಾಗವಹಿಸಿ, ಗುಣಮಟ್ಟದ ಶಿಕ್ಷಣ ನೀಡಲು ಅನುಭವಿ ಹಾಗೂ ಪ್ರತಿಭಾವಂತ ಶಿಕ್ಷಕರು ಮತ್ತು ಉತ್ತಮ ಗುಣಮಟ್ಟದ ಪ್ರಯೋಗಾಲಯ ಪರಿಕರಣಗಳು ಇರಬೇಕಾಗುತ್ತದೆ. ವಿಶ್ವವಿದ್ಯಾನಿಲಯದ ಶಿಕ್ಷಕರ ಸಂಖ್ಯೆ ಗಣನೀಯವಾಗಿ ಕಡಿಮೆ ಇದ್ದು, ಅರ್ಧಕ್ಕಿಂತ ಹೆಚ್ಚು ವಿಭಾಗಗಳು ಅತಿಥಿ ಉಪನ್ಯಾಸಕರ ಮೇಲೆ ಅವಲಂಬಿತವಾಗಿವೆ ಎಂದು ಹೇಳಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಮಾತನಾಡಿ, ಶಿಕ್ಷಣದಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕಾಗಿದೆ, ಪ್ರವೇಶ ಪರೀಕ್ಷೆ ಮಾಡಿ, ವಿದ್ಯಾರ್ಥಿಗಳ ಆಯ್ಕೆಯಾಗಬೇಕು, ಮಹಾವಿದ್ಯಾಲಯಗಳಲ್ಲಿರುವ ನುರಿತ, ಅನುಭವಿ, ಅಧ್ಯಾಪಕರನ್ನು ನಿಯೋಜನೆ ಮೇಲೆ ಪಡೆದು ಪಾಠಪ್ರವಚನ ನೀಡಬಹುದು. ಇದಲ್ಲದೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಕರ್ಷಿಸಲು ಗರಿಷ್ಠ ಅಂಕಗಳಿಸಿದ ವಿದ್ಯಾರ್ಥಿಗಳನ್ನು ತಿಂಗಳಿಗೆ ರೂ 5,000 ಗಳ ವಿದ್ಯಾರ್ಥಿವೇತನ ನೀಡಲು ಕ್ರಮ ಕೈಗೊಳ್ಳಬೇಕು. ಹಾಗಾದಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಾರೆ ಎಂದು ಹೇಳಿದರು. ಆದುದರಿಂದ ಪ್ರವೇಶ ಪರೀಕ್ಷೆಗಳನ್ನು ನಡೆಸುವುದು ಉತ್ತಮವೆಂದು ಹೇಳೀದರು.

ಕುಲಪತಿಗಳು ಮಾತನಾಡಿ, ಈ ವರ್ಷ ನಮಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಸ್ನಾತಕ ಪದವಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಜಿಸಲ್ಲಿಸುತ್ತಾರೆ. ಹಾಗಾಗಿ ಈ ವಿದ್ಯಾರ್ಥಿಗಳಿಗೆ ಮೂರು ವಿಶ್ವವಿದ್ಯಾಲಯಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ ಮುಂದಿನ ವರ್ಷದಿಂದ ನಮ್ಮ ವಿದ್ಯಾರ್ಥಿಗಳು ಈ ವಿಶ್ವವಿದ್ಯಾನಿಲಯದ ಪದವಿ ಪಡೆಯುತ್ತಾರೆ. ಹಾಗಾಗಿ ಅವರು ಈ ವಿಶ್ವವಿದ್ಯಾಲಯದಲ್ಲಿಯೇ ಪ್ರವೇಶ ಪಡೆಯಬೇಕಾಗುತ್ತದೆ. ಆ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಂದ ಪ್ರವೇಶಕ್ಕೆ ಅರ್ಜಿಗಳು ಸ್ವೀಕಾರವಾಗುವ ಸಾಧ್ಯತೆ ಇದೆ. ಇದಲ್ಲದೆ ವಿಶ್ವವಿದ್ಯಾನಿಲಯ ಸಿದ್ಧಪಡಿಸಿದ P.G Entrance Test Regulations ಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಸ್ಥಗಿತಗೊಳಿಸಲು ತೀರ್ಮಾನವಾಗಿರುತ್ತದೆ. ಈಗಾಗಲೇ ಪ್ರವೇಶ ಪರೀಕ್ಷೆ ಇಲ್ಲದೆ ಸ್ನಾತಕೋತ್ತರ ವ್ಯಾಸಂಗದ ಪ್ರವೇಶಕ್ಕೆ ಅಧಿಸೂಚನೆ ಹೊರಡಿಸಲಾಗಿದ್ದು, ಈ ಹಂತದಲ್ಲಿ ಪ್ರವೇಶ ಪರೀಕ್ಷೆಗಳನ್ನು ನಡೆಸಲು ಸಾದ್ಯವಾಗುವುದಿಲ್ಲ. ಕಾರಣ ಈ ವರ್ಷಕ್ಕೆ ಮಾತ್ರ ಪ್ರವೇಶ ಪರೀಕ್ಷೆ ಇಲ್ಲದೇ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಲು ಹಾಗೂ ಪ್ರಸ್ತಾವನೆಯಲ್ಲಿ ಸೂಚಿಸಿದಂತೆ ಪ್ರವೇಶ ಸಂಖ್ಯೆ ಹೆಚ್ಚಿಸಲು ಅನುಮೋದನೆ ನೀಡಬೇಕೆಂದು ಕೋರಿದರು.

ಸಿಂಡಿಕೇಟ್ ನಿರ್ಣಯ

ಅ) ಚರ್ಚೆಯ ನಂತರ ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ತಿಳಿಸಿದಂತೆ, ಗರಿಷ್ಠ ಅಂಕಪಡೆದು ಪ್ರವೇಶ ಪಡೆಯುವ 100 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಕುರಿತು ಅಗತ್ಯ ಕ್ರಮಕೈಕೊಳ್ಳಲು ಹಾಗೂ ಮುಂದಿನ ಶೈಕ್ಷಣಿಕ ವರ್ಷ 2021–22 ನೇ ಸಾಲಿನಿಂದ ಪ್ರವೇಶ ಪರೀಕ್ಷೆಗಳನ್ನು ಜರುಗಿಸಿ ಪ್ರವೇಶ ಪ್ರಕ್ರಿಯೆ ಕೈಗೊಳ್ಳಬೇಕೆಂದು ಸಭೆ ತೀರ್ಮಾನಿಸಿತು.

ಆ) ಪ್ರಸ್ತಾವನೆಯಲ್ಲಿ ತಿಳಿಸಿದಂತೆ ಪ್ರತಿ ಕಲಾ ನಿಕಾಯದ ವಿಭಾಗಕ್ಕೆ ಪ್ರವೇಶ ಸಂಖ್ಯೆ 30 ರಿಂದ 40 ಕ್ಕೆ ಹೆಚ್ಚಿಸಲು ಅನುಮೋದನೆ ನೀಡಲಾಯಿತು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಈ ತೀರ್ಮಾನಕ್ಕೆ ತಮ್ಮ ಅಸಮ್ಮತಿ ಸೂಚಿಸಿದರು.

ವಿಷಯ ಸಂಖ್ಯೆ-20 ರಿಂದ 26

ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು.

ವಿಷಯ ಸಂಖ್ಯೆ-27

**To consider issue of No Objection Certificate to the R.V Institute of Management to get Autonomous statutes under section 2(f) of UGC Act, 1956.**

ಸಿಂಡಿಕೇಟ್ ನಿರ್ಣಯ:

**The Syndicate decided to issue No Objection Certificate to R.V Institute of Management to get Autonomous Statutes under Sec 2(f) of the UGC Act, 1956.**

ವಿಷಯ ಸಂಖ್ಯೆ-28 ರಿಂದ 29

ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು.

ವಿಷಯ ಸಂಖ್ಯೆ- 30

ಸ್ವಚ್ಛತಾ ಕಾರ್ಯಗಳ ಪ್ರಸ್ತುತ ಗುತ್ತಿಗೆ ಅವಧಿಯನ್ನು ಅಕ್ಟೋಬರ್-2020 ರಿಂದ ನೂತನ ಗುತ್ತಿಗೆ ದಾರರು ಆಯ್ಕೆಯಾಗಿ ಕಾರ್ಯ ನಿರ್ವಹಿಸುವವರಿಗೆ ಮುಂದು ವರೆಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ

ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು 31.1.2021 ರವರೆಗೆ ಮುಂದುವರೆಸಲು, ತೀರ್ಮಾನಿಸಿ, ಈ ಅವಧಿಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಸೂಚಿಸಲಾಯಿತು. ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಮತ್ತು ಈಗಾಗಲೇ ಸಿಂಡಿಕೇಟ್ ತೆಗೆದುಕೊಂಡಿರುವ ನಿರ್ಣಯದಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ- 31

**To consider forwarding of application of Presidency College to get Autonomous statutes under section 2(f) of UGC Act, 1956.**

ಸಿಂಡಿಕೇಟ್ ನಿರ್ಣಯ:

**The Syndicate decided to issue No Objection Certificate to Presidency College to get Autonomous Statutes under sec 2(f) of the UGC Act, 1956.**

ವಿಷಯ ಸಂಖ್ಯೆ–32

**To consider forwarding of application of B.M.S College for Women to get Autonomous statutes under section 2(f) of UGC Act, 1956.**

ಸಿಂಡಿಕೇಟ್ ನಿರ್ಣಯ:

**The Syndicate decided to issue No Objection Certificate to B.M.S College for Women to set Autonomous Statutes under sec 2(f) of the UGC Act, 1956.**

ವಿಷಯ ಸಂಖ್ಯೆ–33

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ವಿವಿಧ ಕಾಲೇಜಿನ 4 ವಿದ್ಯಾರ್ಥಿಗಳು ಮರು ಪರೀಕ್ಷೆ ನಡೆಸಲು ಮನವಿ ಮಾಡಿರುವ ಬಗ್ಗೆ

ಸಿಂಡಿಕೇಟ್ ನಿರ್ಣಯ:

ಎಲ್ಲಾ ಮಹಾವಿದ್ಯಾಲಯಗಳಿಗೆ ಸುತ್ತೋಲೆ ಹೊರಡಿಸಿ ಕೋವಿಡ್–19 ಸಾಂಕ್ರಾಮಿಕ ಕಾರಣದಿಂದಾಗಿ ಪರೀಕ್ಷೆ ಬರೆಯಲು ಸಾಧ್ಯವಾಗದಿರುವ ವಿದ್ಯಾರ್ಥಿಗಳ ವಿವರಗಳನ್ನು ಪಡೆದು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ–34

**To consider fixation of honorarium to the Chairman of the Committee constituted to verify the 43rd Indian Social Science Congress-reg**

ಸಿಂಡಿಕೇಟ್ ನಿರ್ಣಯ:

ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು.

ಮುಂದೂಡಲಾದ ವಿಷಯಗಳನ್ನು ಪರಿಗಣಿಸಲು ಸಭೆಯನ್ನು ಮುಂದೂಡಿ ದಿನಾಂಕ 09.12.2020 ರ ಬುಧವಾರದಂದು ಬೆಳಗ್ಗೆ 10.30 ಗಂಟೆಗೆ ಆಯೋಜಿಸಲು ಸಭೆ ನಿರ್ಣಯಿಸಿತು.

ಕುಲಸಚಿವರು ಸಭಾಧ್ಯಕ್ಷರಿಗೆ ಮತ್ತು ಎಲ್ಲಾ ಸದಸ್ಯರಿಗೆ ವಂದನೆಗಳನ್ನು ಅರ್ಪಿಸಿ ನಂತರ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

**ದಿನಾಂಕ 09-12-2020 ರಂದು ಜರುಗಿದ ಮುಂದುವರೆದ ಸಿಂಡಿಕೇಟ್ ಸಭೆಗೆ ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎನ್. ನರಸಿಂಹಮೂರ್ತಿ | ಸಭಾಧ್ಯಕ್ಷರು |
| 2. | ಡಾ: ಹೆಚ್. ಟಿ. ಅರವಿಂದ್ | ಸದಸ್ಯರು |
| 3. | ಶ್ರೀ ಹೆಚ್. ಆರ್. ಸತೀಶ್ | ಸದಸ್ಯರು |
| 4. | ಪ್ರೊ. ಕೆ. ರಮೇಶ್ | ಸದಸ್ಯರು |
| 5. | ಡಾ: ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 6. | ಡಾ: ಪಿ.ವಿ. ಪದ್ಮಜಾ | ಸದಸ್ಯರು |
| 7. | ಶ್ರೀ ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 8. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 9. | ಶ್ರೀ ಹೆಚ್. ಎನ್. ಹರಿಪ್ರಸಾದ್ | ಸದಸ್ಯರು |
| 10. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 11. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 12. | ಡಾ: ಆರ್.ಕೆ. ಚಂದ್ರನಾಥ್ | ಸದಸ್ಯರು |
| 13. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 14. | ಪ್ರೊ: ಬಿ. ರಮೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 15. | ಶ್ರೀಮತಿ ಆರತಿ ಆನಂದ್, ಕೆ.ಎ.ಎಸ್<br>(ಹಿರಿಯ ಶ್ರೇಣಿ) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು (ಮೌಲ್ಯಮಾಪನ) ರವರು ಮುಂದುವರೆದ ಸಿಂಡಿಕೇಟ್ ಸಭೆಯಲ್ಲಿ ಹಾಜರಿದ್ದ ಸಭಾಧ್ಯಕ್ಷರಿಗೆ ಹಾಗೂ ಎಲ್ಲಾ ಸದಸ್ಯರಿಗೆ ಸ್ವಾಗತ ಕೋರಿದರು.

ಅ) ಕಾರ್ಯಸೂಚಿ ಚರ್ಚೆಗೆ ಪ್ರಾರಂಭಿಸುವ ಪೂರ್ವದಲ್ಲಿ ಮಾನ್ಯ ಸದಸ್ಯರಾದ ಡಾ: ಆರ್.ಕೆ. ಚಂದ್ರನಾಥ್ ರವರು ಮಾತನಾಡಿ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ವಿವಿಧ ಸಂಶೋಧನಾ ಕೇಂದ್ರಗಳಿಗೆ ಪರಿಣಿತರ ಸಮಿತಿ ಸಂದರ್ಶಿಸಿ-ತನಿಖೆಮಾಡಿ ನೀಡಿರುವ ವರದಿಗಳ ಮೇಲೆ ಕೈಗೊಂಡಿರುವ ಕ್ರಮದ ಕುರಿತು ಪ್ರಸ್ತಾಪಿಸಿದರು. ಈ ಸಂಶೋಧನಾ ಕೇಂದ್ರಗಳ ಮಾನ್ಯತೆ ನವೀಕರಣ ನೀಡುವುದು ಪ್ರಮುಖವಾಗಿದ್ದು ಕೂಡಲೇ ಈ ಕುರಿತು ಅಧಿಕಾರಿಗಳು ಗಮನ ಹರಿಸಬೇಕೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ಹೆಚ್. ಟಿ. ಅರವಿಂದ್ ರವರು ಈ ಸಮಿತಿಗಳು ನಿವೃತ್ತ ಕುಲಪತಿಗಳ ಅಧ್ಯಕ್ಷತೆಯ ರಚಿಸಿದ ಪರಿಣಿತರ ಸಮಿತಿಗಳಾಗಿದ್ದು, ಈ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಿಗೆ

ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗ ನೀಡುವ ಸಂಭಾವನೆ ದರಗಳನ್ನು ಅಳವಡಿಸಿಕೊಂಡು ಅದರಂತೆ ಪಾವತಿಸಬೇಕೆಂದು ತಿಳಿಸಿದರು.

ಕುಲಪತಿಗಳು ಈ ಕುರಿತು ವಿವರಣೆ ನೀಡಿ ಇನ್ನೂ ಎರಡು ಕೇಂದ್ರಗಳ ವರದಿಗಳನ್ನು ಅಧ್ಯಕ್ಷರು ಸಲ್ಲಿಸಬೇಕಾಗಿದ್ದು, ಅವುಗಳನ್ನು ಸ್ವೀಕರಿಸಿದ ನಂತರ ಪ್ರಾಧಿಕಾರಗಳ ಪರಿಶೀಲನೆಗೆ ಮಂಡಿಸಲಾಗುವುದು ಎಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ:

**ಸಂಶೋಧನಾ ಕೇಂದ್ರಗಳ ಸಂದರ್ಶನ ಹಾಗೂ ತನಿಖೆಗೆ ನೇಮಕ ಮಾಡಲಾದ ಈ ಸಮಿತಿಗಳ ಸದಸ್ಯರಿಗೆ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ ದಿನಾಂಕ 08.01.2018 ರಂದು ಹೊರಡಿಸಿದ ತನ್ನ ಅಧಿಕೃತ ಜ್ಞಾಪನ ಪತ್ರ ಸಂ.F.No.21-1/2015(FD-I/B) ದಲ್ಲಿ ನಿಗದಿಪಡಿಸಿರುವ ಪ್ರತಿ ದಿನಕ್ಕೆ ರೂ. 5,000/- (ರೂಪಾಯಿ ಐದು ಸಾವಿರಗಳು ಮಾತ್ರ) ಸಭಾ ಭತ್ಯೆಯನ್ನು ಸಂಶೋಧನಾ ಕೇಂದ್ರಗಳ ಮಾನ್ಯತೆಗಾಗಿ ನೇಮಕ ಮಾಡಿರುವ ಸಮಿಗಳಿಗೆ ಮಾತ್ರ ಸೀಮಿತಗೊಳಿಸಿ ನೀಡಬೇಕೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ನಂತರ ಕಾರ್ಯಸೂಚಿ ಚರ್ಚೆಗೆ ತೆಗೆದುಕೊಳ್ಳಲಾಯಿತು.

ವಿಷಯ ಸಂಖ್ಯೆ-9:

**ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ Examination Process Management System ಸೇವೆಯನ್ನು ನೀಡುತ್ತಿರುವ ಮೆ// ಲಾಜಿಸಿಸ್ ಮತ್ತು E-Governance in Examination Management ಸೇವೆಯನ್ನು ನೀಡುತ್ತಿರುವ ಮೆ//ಯೂನಿಕ್ಲೇರ್ ಸಂಸ್ಥೆಗಳು ನೀಡುತ್ತಿರುವ ಸೇವೆಗಳಿಗೆ ಸಂಬಂಧಿಸಿದಂತೆ ದಿನಾಂಕ 27.08.2020 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ತೀರ್ಮಾನಗಳ ಪ್ರಕಾರ ಕೈಗೊಂಡಿರುವ ಕ್ರಮಗಳ ಕುರಿತು ಮತ್ತು ಈ ಸಂಸ್ಥೆಗಳು ಸಲ್ಲಿಸಿರುವ ಮನವಿ ಕುರಿತು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ವಿಷಯ ಮಂಡನೆ.**

ಕುಲಸಚಿವರು (ಮೌಲ್ಯಮಾಪನ) ರವರು ಈ ವಿಷಯ ಕುರಿತಂತೆ ಸಮಗ್ರ ವಿವರಗಳನ್ನು ಸಭೆಗೆ ವಿವರಿಸಿದರು. ದಿನಾಂಕ 27.08.2020ರ ಸಿಂಡಿಕೇಟ್ ತೀರ್ಮಾನವನ್ನು ಎರಡೂ ಸಂಸ್ಥೆಗಳಿಗೆ ತಿಳಿಸಲಾಗಿದ್ದು, ಸದರಿ ಸಂಸ್ಥೆಗಳು ದಿನಾಂಕ 28.09.2020 ರ ಪತ್ರದಲ್ಲಿ ಪರೀಕ್ಷಾ ಕೆಲಸಗಳು ಪ್ರಗತಿಯಲ್ಲಿರುವುದರಿಂದ, ಸಿಂಡಿಕೇಟ್ ತೀರ್ಮಾನದಂತೆ ಸುರಕ್ಷತಾ ಕ್ರಮಗಳನ್ನು ಅಳವಡಿಸಲು ಮೂರು ತಿಂಗಳ ಕಾಲಾವಕಾಶ ಕೇಳಿದ್ದು, ನಂತರ ದಿನಾಂಕ 14.10.2020 ರ ಪತ್ರದಲ್ಲಿ ವಿವರವಾದ ಉತ್ತರವನ್ನು ನೀಡಿರುತ್ತಾರೆ. ಒಟ್ಟಾರೆಯಾಗಿ ಎರಡೂ ಸಂಸ್ಥೆಗಳು Exit plan ಒಪ್ಪಂದಕ್ಕೆ ಬರಲು ತಮ್ಮ ಅಸಮ್ಮತಿಯನ್ನು ಸೂಚಿಸಿರುತ್ತವೆ ಎಂದು ಹೇಳಿದರು. ಸುರಕ್ಷತಾ

ಕ್ರಮಗಳ ಕುರಿತಂತೆ ಸಮಿತಿ ಸೂಚಿಸಿದ ಶಿಫಾರಸ್ಸುಗಳಲ್ಲಿ ಸುಮಾರು 95% ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡಿರುತ್ತಾರೆ ಎಂದು ಸಭೆಗೆ ತಿಳಿಸಿದರು. ಸದರಿ ಸಂಸ್ಥೆಯವರು ಬಾಕಿ ಇರುವ ಬಿಲ್ಲುಗಳ ಪಾವತಿಗಾಗಿ ವಿನಂತಿಸುತ್ತಿದ್ದು, ಆ ಕುರಿತು ಸಿಂಡಿಕೇಟ್ ಸಭೆ ನಿರ್ಧಾರ ಕೈಗೊಳ್ಳಬೇಕೆಂದು ಹೇಳಿದರು. ಪರೀಕ್ಷಾ ಕೆಲಸಗಳು (continuous process) ಸತತವಾಗಿ ಮುಂದುವರೆಯುವ ಪ್ರಕ್ರಿಯೆಯಾಗಿದ್ದು, ಪರೀಕ್ಷಾ ವಿಭಾಗದಲ್ಲಿ ಸಿಬ್ಬಂದಿಗಳ ಸಂಖ್ಯೆ ಅತ್ಯಂತ ಕಡಿಮೆ ಇರುವುದರಿಂದ, ಪರೀಕ್ಷಾ ವ್ಯವಸ್ಥೆ ಹಾಲಿ ತಂತ್ರಜ್ಞಾನದ ಮೇಲೆ ಅವಲಂಭಿತವಾಗಿದೆ. ಆದ ಕಾರಣ ಈ ಸಂಸ್ಥೆಗಳೊಂದಿಗೆ ಒಪ್ಪಂದ ರದ್ದುಪಡಿಸುವುದಾದರೆ, ಪರ್ಯಾಯ ವ್ಯವಸ್ಥೆ ಮಾಡಿಕೊಂಡು ನಂತರ ಈ ಸಂಸ್ಥೆಗಳ ಸೇವೆಯನ್ನು ರದ್ದುಪಡಿಸಬೇಕಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಹೆಚ್. ಆರ್. ಸತೀಶ್ ರವರು ಸರ್ಕಾರದ ತತ್ರಾಂಶ ಸಿದ್ದಪಡಿಸಲು ಅಗತ್ಯವಾದ ಸಮಯ ಕುರಿತಂತೆ ಕೇಳಿದ ಮಾಹಿತಿಗೆ ಕುಲಸಚಿವರು ಸುಮಾರು 6 ತಿಂಗಳ ಅವಧಿಯಲ್ಲಿ ಸಿದ್ದವಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್, ಶ್ರೀ ಕರಣ್‌ಕುಮಾರ್ ಮುಂತಾದವರು ಮಾತನಾಡಿ, ಸಂಸ್ಥೆಯವರು Exit plan ಒಪ್ಪಂದಕ್ಕೆ ಒಪ್ಪಿದರೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವುದು ಕಷ್ಟವಾಗುವುದಿಲ್ಲವೆಂದು ಹೇಳಿದರು.

ಕುಲಪತಿಗಳು ಮಾತನಾಡಿ, ನಾವು ಈ ಸಂಸ್ಥೆಗಳೊಂದಿಗೆ Exit plan ಒಪ್ಪಂದ ಮಾಡಿಕೊಳ್ಳುವುದಾದರೆ, ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲೇ ಬೇಕಾಗುತ್ತದೆ. ಸರ್ಕಾರದ ಆದೇಶದಲ್ಲಿ ಈ ಕುರಿತು ಹೊಸದಾಗಿ ಯಾವುದೇ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದನ್ನು ನಿರ್ಬಂಧಿಸಿರುವ ಹಿನ್ನೆಲೆಯಲ್ಲಿ, ಸಭೆ ತೀರ್ಮಾನ ಕೈಗೊಳ್ಳಬೇಕೆಂದು ಹೇಳಿದರು.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ಹಿಂದಿನ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ದರಗಳ ಕುರಿತಂತೆ ಸಂಸ್ಥೆಗಳೊಂದಿಗೆ ಸಮಾಲೋಚನೆ ಮಾಡಲು, ಸುರಕ್ಷತಾ ಕ್ರಮಗಳ ಕುರಿತಂತೆ ಬಾಹ್ಯ ಸಂಸ್ಥೆಯಿಂದ ತನಿಖೆ ನಡೆಸಿ ವರದಿ ಪಡೆಯಲು ಮತ್ತು Exit plan ಒಪ್ಪಂದ ಕುರಿತಂತೆ ನಿರ್ಧಾರಕ್ಕೆ ಬರಲು ಸೂಚಿಸಲಾಗಿತ್ತು ಎಂದು ಹೇಳಿದರು. ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಪ್ರಸ್ತುತ ಸನ್ನಿವೇಶದಲ್ಲಿ ಪರೀಕ್ಷೆಗಳನ್ನು ಫೆಬ್ರವರಿ ತಿಂಗಳಲ್ಲಿ ಜರುಗಿಸುವ ಸಾಧ್ಯತೆ ಇರುವುದರಿಂದ, ಈ ಸಂಸ್ಥೆಗಳೊಂದಿಗೆ Exit plan ಒಪ್ಪಂದ ಮಾಡಿಕೊಂಡಲ್ಲಿ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಸಾಕಷ್ಟು ಸಮಯಾವಕಾಶವಿದೆ ಎಂದು ಹೇಳಿ ಸದರಿ ಸಂಸ್ಥೆಗಳು Exit plan ಒಪ್ಪಿದಲ್ಲಿ ಮುಂದಿನ ಕ್ರಮ ಕೈಕೊಳ್ಳಬಹುದೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ್ ರವರು ಹಿಂದಿನ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಿ ದರ ಸಂಧಾನ ಮಾಡಿಕೊಳ್ಳಬೇಕು ಇಲ್ಲವಾದಲ್ಲಿ Exit plan ಒಪ್ಪಂದ ಮಾಡಿ ಆ ಒಪ್ಪಂದದಂತೆ ಬಿಲ್ಲುಗಳನ್ನು ಪಾವತಿ ಮಾಡಬೇಕಾಗುತ್ತದೆ ಎಂದು ಹೇಳಿ, Exit plan ಒಪ್ಪಂದಕ್ಕೆ ಒಪ್ಪಿರುವುದಿಲ್ಲವಾದ್ದರಿಂದ ಮೂಲ ಒಪ್ಪಂದವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಮಾನ್ಯ ಸದಸ್ಯರಾದ ಡಾ: ಹೆಚ್. ಟಿ. ಅರವಿಂದ್ ರವರು ಒಪ್ಪಂದ ಪತ್ರದಲ್ಲಿ Arbitration ಮತ್ತು Termination of Agreement ಕುರಿತು ಅವಕಾಶ ಇಲ್ಲವೆಂದು ತಿಳಿಸಿ, ಈಗಾಗಲೇ ಸಿಂಡಿಕೇಟ್ ತೆಗೆದುಕೊಂಡ ತೀರ್ಮಾನದಂತೆ ಮುಂದುವರೆಯಬೇಕೆಂದು ಹೇಳಿದರು. ಕುಲಸಚಿವರು(ಮೌಲ್ಯಮಾಪನ) ರವರು ಈಗಾಗಲೇ ಈ ಸಂಸ್ಥೆಗಳಿಗೆ ನೋಟೀಸು ನೀಡಿ, ಅವರಿಂದ ಉತ್ತರ ಬಂದಿರುವುದರಿಂದ, ಅವರು Exit plan ಒಪ್ಪಂದಕ್ಕೆ ಬರಲು ಸಿದ್ಧವಿಲ್ಲವಾದ್ದರಿಂದ ಅವರನ್ನು ಮುಂದುವರೆಸುವ ಕೋರಿಕೆಯನ್ನು ಸಿಂಡಿಕೇಟ್ ಸಭೆ ಪರಿಗಣಿಸಿರುವುದಿಲ್ಲ ಎಂದು ತೀರ್ಮಾನವಾದರೆ, ನಂತರ ಮುಂದಿನ ಕ್ರಮಕ್ಕೆ ಮುಂದುವರೆಯಬಹುದೆಂದು ಹೇಳಿದರು. ವಿಚಾರಣೆ ಪ್ರಗತಿಯಲ್ಲಿದೆ ಎಂದು ಈಗಾಗಲೇ ರಾಜ್ಯಪಾಲರಿಗೆ ಉತ್ತರ ನೀಡಲಾಗಿದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಡಾ: ಆರ್.ಕೆ. ಚಂದ್ರನಾಥ್ ರವರು ಮೇಲಿನ ಅಭಿಪ್ರಾಯಕ್ಕೆ ಸಹಮತ ವ್ಯಕ್ತ ಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಈಗಾಗಲೇ ಈ ಕುರಿತು ದಿನಾಂಕ 27.08.2020 ರ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನವಾಗಿದೆ. ಆ ತೀರ್ಮಾನದಂತೆ ಯಾವ ಯಾವ ಕ್ರಮ ಕೈಕೊಳ್ಳಲಾಗಿದೆ ಎಂಬುವುದನ್ನು ಸಭೆಯ ಗಮನಕ್ಕೆ ತರಬೇಕೆಂದು ಕುಲಸಚಿವರು (ಮೌಲ್ಯಮಾಪನ) ರವರಿಗೆ ತಿಳಿಸಿದರು. ಅದರಂತೆ ಕುಲಸಚಿವರು (ಮೌಲ್ಯಮಾಪನ) ರವರು ದಿನಾಂಕ 27.08.2020 ರ ಸಿಂಡಿಕೇಟ್ ವಿಶೇಷ ಸಭೆಯ ತೀರ್ಮಾನಗಳನ್ನು ಓದಿ ಹೇಳಿ ಆ ಕುರಿತು ಕೈಗೊಂಡ ಕ್ರಮಗಳನ್ನು ವಿವರಿಸಿದರು.

ದಿನಾಂಕ 27-08-2020ರ ಸಿಂಡಿಕೇಟ್ ಸಭೆಯ ನಿರ್ಣಯ:

*1. Examination Process Management System ಮತ್ತು E-Governance in Examination Management ತಂತ್ರಾಂಶ (software) ಗಳಲ್ಲಿ ಅಳವಡಿಸಿರುವ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಲು ರಚಿಸಲಾದ ಸಮಿತಿಯ ವರದಿಯಲ್ಲಿ ಸೂಚಿಸಿರುವ ಸುರಕ್ಷತಾ ಕ್ರಮಗಳನ್ನು 30 ದಿವಸಗಳಲ್ಲಿ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳುವಂತೆ ಲಾಜಿಸಿಸ್ ಮತ್ತು ಯ್ಯೂನಿಕ್ಲೇರ್ ಸಲ್ಯೂಶನ್ಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯವರಿಗೆ ಸೂಚಿಸಲು ಮತ್ತು ಸಂಸ್ಥೆಯವರು ಅಗತ್ಯ ಕ್ರಮ ಕೈಕೊಂಡು ಆ*

ಕುರಿತುಸೀನಿಯರ್ ಸಿಸ್ಟಮ್ ಅನಲಿಸ್ಟ್‌ರವರು ಪರಿಶೀಲಿಸಿದ ನಂತರ ವಿಶ್ವಾಸಾರ್ಹ ಮೂರನೇ ವ್ಯಕ್ತಿ / ಸಂಸ್ಥೆಯಿಂದ ಧೃಢೀಕರಿಸಿಕೊಳ್ಳಬೇಕೆಂದು ತೀಮಾನಿಸಲಾಯಿತು.

ಕ್ರಮ: ಮೇಲಿನ ನಿರ್ಣಯ ಕುರಿತಂತೆ ಸಂಸ್ಥೆಯವರಿಗೆ ದಿನಾಂಕ 09.09.2020 ಹಾಗೂ ದಿನಾಂಕ 09.10.2020 ರಂದು ಪತ್ರಗಳನ್ನು ಬರೆಯಲಾಗಿದೆ. ಸಂಸ್ಥೆಯವರು ದಿನಾಂಕ 28.09.2020ರಂದು ಪತ್ರ ಬರೆದು ಸುರಕ್ಷತಾ ಕ್ರಮಗಳನ್ನು ಅಳವಡಿಸಲು ಮೂರು ತಿಂಗಳ ಕಾಲಾವಕಾಶ ಕೇಳಿದ್ದು, ಸಮಿತಿ ಸೂಚಿಸಿದ 95% ಸುರಕ್ಷತಾ ಕ್ರಮಗಳನ್ನು ಅಳವಡಿಸಿರುವುದಾಗಿ ದಿನಾಂಕ 02.11.2020 ಪತ್ರದಲ್ಲಿ ತಿಳಿಸಿರುತ್ತಾರೆ. 3rd Party Inspection ಮಾಡಲು ಕ್ರಮ ಕೈಕೊಳ್ಳಲಾಗುವುದು ಎಂದು ಹೇಳಿದರು.

2. ರಾಜ್ಯ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾನಿಲಯಗಳು ಮತ್ತು ಅವುಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಲ್ಲಿ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆಯನ್ನು (Unified University and College Management System - UUCMS) ಅನುಷ್ಠಾನಗೊಳಿಸಲು ತೀರ್ಮಾನಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ಆ ಕಾರಣದಿಂದ ಸೆಪ್ಟಂಬರ್/ ಅಕ್ಟೋಬರ್ 2020 ರ ಪರೀಕ್ಷೆ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಇವರ ಸೇವೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು.

ಕ್ರಮ: Unified University and College Management System – (UUCMS) ಅನುಷ್ಠಾನಗೊಳಿಸುವಕುರಿತು ಸರ್ಕಾರದಿಂದ ಇದುವರೆಗೂ ಯಾವ ನಿರ್ಧಾರ/ಮಾಹಿತಿ ಬಂದಿರುವುದಿಲ್ಲ. ಕಾರಣ ಸದರಿ ಸಂಸ್ಥೆಗಳ ಸೇವೆ ಮುಂದುವರೆಸಲಾಗಿದೆ.

3. ಮಧ್ಯಂತರ ಕ್ರಮವಾಗಿ ಮುಂದಿನ 30 ದಿವಸಗಳಲ್ಲಿ, ವಿಶ್ವವಿದ್ಯಾನಿಲಯದ ಅಧಿಕಾರಿಗಳು ಪ್ರಸ್ತಾಪಿಸಿದಂತೆ ಹೊರಗುತ್ತಿಗೆಯ ತತ್ರಾಂಶ ಸೇವೆಯನ್ನು ಮುಕ್ತಾಯಗೊಳಿಸಲು ಮೆ. ಲಾಜಿಸಿಸ್ ಮತ್ತು ಮೆ. ಯುನಿಕ್ಲೇರ್ ಸಂಸ್ಥೆಗಳೊಂದಿಗೆ ನಿರ್ಗಮನ ಯೋಜನೆಯನ್ನು (Exit Plan) ರೂಪಿಸಲು ಹಾಗೂ ನಿರ್ಗಮನ ಯೋಜನೆ (Exit Plan) ಮತ್ತು ಅದರಿಂದ ಉಂಟಾಗುವ ಹಣಕಾಸಿನ ಪರಿಣಾಮಗಳ ವಿವರಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಲು ಸೂಚಿಸಲಾಯಿತು.

ಕ್ರಮ: ಸದರಿ ಸಂಸ್ಥೆಗಳು Exit Plan ಒಪ್ಪಂದಕ್ಕೆ ಬರಲು ಸಮ್ಮತಿ ಸೂಚಿಸಿರುವುದಿಲ್ಲ ಎಂದು ಸಭೆಗೆ ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

**ಮೇಲೆ ತಿಳಿಸಿದ ವಿವರಣೆಗಳ ಹಿನ್ನೆಲೆಯಲ್ಲಿ ಹಾಗೂ ದಿನಾಂಕ 27.08.2020 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ 4ನೇ ತೀರ್ಮಾನದಂತೆ ನಿರ್ಗಮನ ಯೋಜನೆ (Exit Plan)**

ಒಪ್ಪಂದಕ್ಕೆ ಬರಲು ವಿಫಲವಾದುದರಿಂದ ಮೆ. ಲಾಜಿಸಿಸ್ ಮತ್ತು ಮೆ. ಯುನಿಕ್ಲೇರ್ ಸಂಸ್ಥೆಗಳ ಹೊರಗುತ್ತಿಗೆಯ ತತ್ರಾಂಶ ಸೇವೆಗಳಿಗೆ ಸಂಬಂಧಿಸಿದ ಇ-ಪ್ರೊಕ್ಯೂರಮೆಂಟ್ ಕಾರ್ಯವಿಧಾನ ಮತ್ತು ಆರ್ಥಿಕ ಅಂಶಗಳ ಕುರಿತು ಮಾಡಲಾದ ಆಪಾದನೆಗಳನ್ನು ಪರಿಶೀಲಿಸಲು ಒಬ್ಬ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ, ಏಕ ಸದಸ್ಯ ವಿಚಾರಣಾ ಸಮಿತಿ ರಚಿಸಿ ವಿಚಾರಣೆ ಜರುಗಿಸಬೇಕೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ವಿಚಾರಣೆಗಾಗಿ ಶಿಫಾರಸ್ಸು ಮಾಡುವ ನ್ಯಾಯಾಧೀಶರ ಹೆಸರುಗಳನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಿ ಅನುಮೋದನೆ ಪಡೆಯಲು ಸೂಚಿಸಲಾಯಿತು

ವಿಷಯ ಸಂಖ್ಯೆ-10

**ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ 2019-20 ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಪೂರೈಸುವ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಮತ್ತು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿ ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಮತ್ತು ನಗದು ಬಹುಮನಗಳನ್ನು ನೀಡುವ ಸಂಬಂಧ**

ಕುಲಸಚಿವರು (ಮೌಲ್ಯಮಾಪನ) ರವರು ವಿಷಯವನ್ನು ಸಭೆಗೆ ಪ್ರಾಸ್ತಾಪಿಸಿದರು.

ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವವನ್ನು 2021ರ ಫೆಬ್ರವರಿ/ಮಾರ್ಚ್ ತಿಂಗಳಲ್ಲಿ ನಡೆಸಬೇಕಾಗಿದೆ, ಈ ಸಲ 32 ಸ್ನಾತಕೋತ್ತರ ವ್ಯಾಸಂಗಗಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಅಥವಾ ನಗದು ಬಹುಮಾನಗಳನ್ನು ನೀಡುವ ಕುರಿತು ಸಿಂಡಿಕೇಟ್ ಸಭೆ ಪರಿಗಣಿಸಬೇಕಾಗಿದೆ. ಸಧ್ಯ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಚಿನ್ನದ ಪದಕ ಸ್ಥಾಪಿಸಿಲ್ಲ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಯಾವ ಚಿನ್ನದ ಪದಕದ ದತ್ತಿಗಳು ಈ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಆಗಿಲ್ಲ. ಆದಕಾರಣ ದಾನಿಗಳನ್ನು ಸಂಪರ್ಕಿಸಿ ದೇಣಿಗೆ ಸ್ವೀಕರಿಸಲು ಸಮಯದ ಅಭಾವ ಇರುವುದರಿಂದ, ವಿಶ್ವವಿದ್ಯಾನಿಲಯ ಈ 32 ವ್ಯಾಸಂಗಗಳಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಲು ಅಗತ್ಯ ಹಣಕಾಸಿನ ಠೇವಣಿ ಮಾಡಬೇಕೆಂದು ಮತ್ತು ಪ್ರಸ್ತುತ ವರ್ಷಕ್ಕೆ ಚಿನ್ನದ ಪದಕ ನೀಡಲು ಅಗತ್ಯವಾದ ಪ್ರತಿ ಚಿನ್ನದ ಪದಕಕ್ಕೆ ರೂ. 25-30 ಸಾವಿರದಂತೆ ಒಟ್ಟು ರೂ. 9,60,000/- ಗಳ ವೆಚ್ಚ ಮಾಡಲು ಅನುಮತಿ ನೀಡಲು ಪರಿಗಣಿಸಬೇಕೆಂದು ಕೋರಿದರು.

ಕುಲಪತಿಗಳು ಮಾತನಾಡಿ ಬೆಂಗಳೂರು ವಿಶ್ವವಿದ್ಯಾಲಯ ಬಹಳ ಹಿಂದೆ ಸ್ವೀಕರಿಸಿದ ಠೇವಣಿ ಮೊತ್ತ ಅತ್ಯಂತ ಕಡಿಮೆ ಇರುವುದರಿಂದ ಅದು ಪ್ರಸ್ತುತ ಸನ್ನಿವೇಶದಲ್ಲಿ ಉಪಯೋಗವಾಗುವುದಿಲ್ಲ. ಆದುದರಿಂದ ಪ್ರತಿ ಚಿನ್ನದ ಪದಕಕ್ಕೆ ರೂ. 6.00 ಲಕ್ಷದಂತೆ ಒಟ್ಟು 32 ಚಿನ್ನದ ಪದಕಗಳಿಗೆ ಅಂದಾಜು 2.00 ಕೋಟಿ ರೂಪಾಯಿಗಳನ್ನು ವಿಶ್ವವಿದ್ಯಾನಿಲಯದ ಹಣದಿಂದ ಠೇವಣಿಯಾಗಿರಿಸಿ ಅದರ ಮೇಲೆ ಸ್ವೀಕಾರವಾಗುವ ಬಡ್ಡಿಯ

ಮೊತ್ತವನ್ನು ಮುಂದಿನ ಘಟಿಕೋತ್ಸವಕ್ಕೆ ವಿನಿಯೋಗಿಸಬಹುದು, ಪ್ರಸ್ತುತ ಯೋಜಿಸಿರುವ ಮುಂದಿನ ಘಟಿಕೋತ್ಸವಕ್ಕೆ 32 ಚಿನ್ನದ ಪದಕಗಳನ್ನು ನೀಡಲು ಅಂದಾಜು ರೂ. 10.00 ಲಕ್ಷಗಳನ್ನು ಹಾಗೂ ಠೇವಣಿಗಾಗಿ ರೂ.2.00 ಕೋಟಿಗಳನ್ನು ವಿಶ್ವವಿದ್ಯಾನಿಲಯದ ನಿಧಿಯಿಂದ ಮಂಜೂರು ಮಾಡಲು ಸಭೆ ಪರಿಗಣಿಸಬೇಕೆಂದು ಹೇಳಿದರು.

ಮುಂದಿನ ವರ್ಷ ಸ್ನಾತಕ ವ್ಯಾಸಂಗಗಳ ವಿದ್ಯಾರ್ಥಿಗಳು ಅಚಿತಿಮ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದರಿಂದ ವಿವಿಧಸ್ನಾತಕ ವ್ಯಾಸಂಗಗಳಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ವಿದ್ಯಾರ್ಥಿಗಳಿಗೂ ಸಹ ಚಿನ್ನದ ಪದಕಗಳನ್ನು ನೀಡಬೇಕಾಗುತ್ತದೆ. ಅಲ್ಲಿ ಹೆಚ್ಚಿನ ಸಂಖ್ಯೆಯ ಚಿನ್ನದ ಪದಕಗಳನ್ನು ಸ್ಥಾಪಿಸಬೇಕಾಗುತ್ತದೆ ಎಂದು ಹೇಳಿ ಸದಸ್ಯರು ಸಹ ದಾನಿಗಳನ್ನು ಗುರುತಿಸಲು ಸಹಕರಿಸಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್, ಶ್ರೀ ಥಾಮಸ್ ನೀಲಿಯಾರ, ಶ್ರೀ ಶ್ರೀನಿವಾಸಯ್ಯ, ಶ್ರೀ ಎಂ. ಚಿಕ್ಕಮುನಿಯಪ್ಪ, ಪ್ರೊ ಕೆ. ರಮೇಶ್, ಡಾ. ಹೆಚ್. ಟಿ. ಅರವಿಂದ್, ಶ್ರೀಮತಿ ಜ್ಯೋತಿ ವಿಜಯ್, ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡು ಅಭಿಪ್ರಾಯಗಳನ್ನು ನೀಡಿದರು.

- ಚಿನ್ನದ ಪದಕದ ಬದಲು ನಗದು ಬಹುಮಾನ ನೀಡಿದರೆ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ;
- ಬಂಗಾರದ ಲೇಪನದ ಬೆಳ್ಳಿ ಚಿನ್ನದ ಪದಕ ನೀಡಿ ಉಳಿದ ಹಣವನ್ನು ನಗದು ಬಹುಮಾನವಾಗಿ ಡಿ.ಡಿ. ಅಥವಾ ಸದರಿ ವಿದ್ಯಾರ್ಥಿಗಳ ಖಾತೆಗೆ ಹಣ ವರ್ಗಾವಣೆ ಮಾಡಿ ಪ್ರಮಾಣ ಪತ್ರ ನೀಡಬಹುದು;
- ಠೇವಣಿಗಳಿಗೆ ಬ್ಯಾಂಕ್‌ಗಳು ನೀಡುವ ಬಡ್ಡಿದರವನ್ನು ತುಲನೆಮಾಡಿ ಪ್ರತಿ ಚಿನ್ನದ ಪದಕಕ್ಕೆ ಪ್ರತ್ಯೇಕವಾದ ಠೇವಣಿ ಇಟ್ಟಲ್ಲಿ ಹೆಚ್ಚಿನ ಬಡ್ಡಿದರವನ್ನು ಪಡೆಯುವ ಕುರಿತು ಪರಿಶೀಲಿಸಬೇಕು;
- ಸಂಯೋಜಿತ ಮಹಾವಿದ್ಯಾಲಯಗಳಿಗೆ ಪತ್ರ ಬರೆದು ಆಯಾ ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ಚಿನ್ನದ ಪದಕ ಸ್ಥಾಪಿಸುವಂತೆ ಕೋರಬೇಕು;
- ಚಿನ್ನದ ಪದಕಗಳ ನಿಧಿ ಪ್ರತಿ ವರ್ಷ 5% ರಷ್ಟು ಹೆಚ್ಚಿಸಲು ಅವಕಾಶವಿರಬೇಕು.
- ಸ್ನಾತಕ ಪರೀಕ್ಷೆಗಳ ಫಲಿತಾಂಶ ಬಂದು ಮುಂದಿನ ಘಟಿಕೋತ್ಸವದಲ್ಲಿ ಚಿನ್ನದ ಪದಕ ನೀಡಲು ಈಗಲೇ ಕಾರ್ಯತತ್ಪರವಾಗಬೇಕು, ಸ್ಥಾಪಿಸಬಹುದಾದ ಚಿನ್ನದ ಪದಕಗಳನ್ನು ಪಟ್ಟಿಮಾಡಿ ಸಿಂಡಿಕೇಟ್ ಸಭೆಗೆ ಮಂಡಿಸಬೇಕು.

ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಯ್ಯನವರು ಆಗಸ್ಟ್ / ಸೆಪ್ಟೆಂಬರ್ ನಲ್ಲಿ ಸ್ನಾತಕ ವಿದ್ಯಾರ್ಥಿಗಳ ಪರೀಕ್ಷೆ ಮುಗಿಯುವುದರಿಂದ ಒಟ್ಟಿಗೆ ಘಟಿಕೋತ್ಸವ ನಡೆಸುವ ಕುರಿತು ಪರಿಶೀಲಿಸಬೇಕು, ಇದರಿಂದ ಖರ್ಚು ವೆಚ್ಚಗಳ ಉಳಿತಾಯವಾಗುತ್ತದೆ ಎಂಬ ಸಲಹೆಗೆ, ಯು.ಜಿ.ಸಿ ನಿಯಾಮಾವಳಿಗಳ ಪ್ರಕಾರ ಅಂತಿಮ ಪರೀಕ್ಷೆ

ಮುಗಿದ ಆರು ತಿಂಗಳಲ್ಲಿ ಘಟಿಕೋತ್ಸವ ಜರುಗಿಸಬೇಕೆಂದು ಇರುವುದರಿಂದ ಬೇಗನೇ ಘಟಿಕೋತ್ಸವ ಜರುಗಿಸಬೇಕಾಗಿದೆ ಎಂದು ತಿಳಿಸಲಾಯಿತು. ಇದರಿಂದ ವಿದ್ಯಾರ್ಥಿಗಳು ಸಹ ಸಂತೋಷಪಡುತ್ತಾರೆ ಮತ್ತು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲು ಸಹಕಾರಿಯಾಗುತ್ತದೆ ಎಂದು ಮಾನ್ಯ ಸದಸ್ಯರಾದ ಡಾ: ಆರ್.ಕೆ. ಚಂದ್ರನಾಥ್ ರವರು ಹೇಳಿದರು.

ಸಿಂಡಿಕೇಟ್ ನಿರ್ಣಯ:

1. ಫೆಬ್ರವರಿ/ಮಾರ್ಚ್ 2021 ತಿಂಗಳಲ್ಲಿ ಘಟಿಕೋತ್ಸವ ಜರುಗಿಸಲು ಸಭೆ ಅನುಮೋದನೆ ನೀಡಿತು.
2. ಫೆಬ್ರವರಿ/ಮಾರ್ಚ್ 2021 ರಲ್ಲಿ ಜರುಗುವ ಘಟಿಕೋತ್ಸವದಲ್ಲಿ 32 ಸ್ನಾತ್ತಕೋತ್ತರ ವ್ಯಾಸಂಗಗಳಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ಪ್ರತಿ ವಿದ್ಯಾರ್ಥಿಗೆ ಚಿನ್ನದ ಪದಕ ಹಾಗೂ ನಗದು ಬಹುಮಾನ ನೀಡಲು, ಪ್ರತಿ ಚಿನ್ನದ ಪದಕಕ್ಕೆ ರೂ. 30,000/- ರಂತೆ ಒಟ್ಟು 32 ಚಿನ್ನದ ಪದಕಗಳಿಗೆ ರೂ. 9,60,000 ಆಗುವುದರಿಂದ ರೂ. 10 ಲಕ್ಷಗಳ ಮೊತ್ತವನ್ನು ವಿನಿಯೋಗಿಸಲು ಅನುಮತಿ ನೀಡಲಾಯಿತು.
3. ಮುಂಬರುವ ಘಟಿಕೋತ್ಸವಗಳಲ್ಲಿ 32 ಚಿನ್ನದ ಪದಕಗಳನ್ನು ನೀಡಲು ತಗಲುವ ತಲಾ 6.00 ಲಕ್ಷ ರೂಪಾಯಿಗಳಂತೆ ಒಟ್ಟು ಎರಡು ಕೋಟಿ ರೂಪಾಯಿಗಳನ್ನು ಠೇವಣಿ ರೂಪದಲ್ಲಿ ಇಡಲು ಹಾಗೂ ಈ ಮೊತ್ತದ ಮೇಲೆ ಬರುವ ಬಡ್ಡಿ ಹಣದಿಂದ ಒಟ್ಟು 32 ಚಿನ್ನದ ಪದಕ (ಚಿನ್ನ ಲೇಪಿತ ಬೆಳ್ಳಿ ಪದಕ) ಗಳನ್ನು ನೀಡಬಹುದೆಂದು ಹಾಗೂ ರೂ. 25,000/-) ಗಳನ್ನು ಪ್ರತಿ ವಿದ್ಯಾರ್ಥಿಗೆ ನಗದು ಬಹುಮಾನವಾಗಿ ಡಿ.ಡಿ. ಅಥವಾ ಅವರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿ ಪ್ರಮಾಣ ಪತ್ರ ನೀಡಬೇಕೆಂದು ತೀರ್ಮಾನಿಸಲಾಯಿತು.
4. ಸ್ನಾತಕ ಹಾಗೂ ಸ್ನಾತಕೋತ್ತರ ವ್ಯಾಸಂಗಗಳಲ್ಲಿ ಸ್ಥಾಪಿಸಬಹುದಾದ ಚಿನ್ನದ ಪದಕಗಳ ಕುರಿತು ವಿವಿಧ ವ್ಯಾಸಂಗ, ವಿಷಯ ಮುಂತಾದ ಎಲ್ಲಾ ಸಾಧ್ಯತೆಗಳನ್ನು ಪರಿಶೀಲಿಸಿ ಒಂದು ವಿಸ್ತೃತ ಪಟ್ಟಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ತೀರ್ಮಾನಿಸಲಾಯಿತು
5. ಕುಲಪತಿಗಳು ಒಂದು ಮನವಿ ಪತ್ರವನ್ನು ಸಿದ್ಧಪಡಿಸಿ ಅದನ್ನು ವಿವಿಧ ಸಂಯೋಜಿತ ಮಹಾವಿದ್ಯಾಲಯಗಳಿಗೆ ಕಳುಹಿಸಿ ಅವರಿಗೆ ಚಿನ್ನದ ಪದಕ ಸ್ಥಾಪಿಸಲು ಠೇವಣಿ ನೀಡುವಂತೆ ವಿನಂತಿಸಬೇಕೆಂದು ತೀರ್ಮಾನಿಸಲಾಯಿತು.
6. ವಿವಿಧ ದಾನಿಗಳು/ ಕಾರ್ಪೋರೇಟ್ ಕಛೇರಿ/ಕಂಪನಿಗಳನ್ನು ಸಂಪರ್ಕಿಸಲು ಕುಲಸಚಿವರು (ಮೌಲ್ಯಮಾಪನ) ರವರು ವಿಸ್ತೃತ ಪಟ್ಟಿ ಸಿದ್ಧಪಡಿಸಿದ ನಂತರ ಸಿಂಡಿಕೇಟ್ ಸದಸ್ಯರ ಸಮಿತಿ ರಚಿಸಬಹುದೆಂದು ಅಭಿಪ್ರಾಯ ಪಡಲಾಯಿತು.
7. ಘಟಿಕೋತ್ಸವ ಭಾಷಣ ನೀಡಲು ಅತಿಥಿಗಳ ಹೆಸರನ್ನು ಕುಲಾಧಿಪತಿಗಳು ಅನುಮೋದಿಸಬೇಕಾಗುತ್ತದೆ ಎಂದು ಸಭೆಗೆ ತಿಳಿಸಲಾಯಿತು

ವಿಶ್ವವಿದ್ಯಾನಿಲಯದ ವತಿಯಿಂದ ಆಯೋಜಿಸುವಸಮಾರಂಭಗಳಿಗೆ ಅತಿಥಿಗಳನ್ನು ಆಹ್ವಾನಿಸುವ ಸಂದರ್ಭದಲ್ಲಿ, ಸಿಂಡಿಕೇಟ್ ಸದಸ್ಯರ ಗಮನಕ್ಕೆ ತರಲಾಗುವುದೆಂದು ಕುಲಪತಿಗಳು ತಿಳಿಸಿದರು. ವಿವಿಧ ವಿಭಾಗಗಳು

ಆಯೋಜಿಸುವ ಕಾರ್ಯಕ್ರಮಗಳಿಗೆ ಅತಿಥಿಗಳನ್ನು ಆಹ್ವಾನಿಸಲು ಆಯಾ ವಿಭಾಗಗಳ ವಿವೇಚನೆಗೆ ಬಿಡಲಾಗುವುದೆಂದು ತಿಳಿಸಲಾಯಿತು.

ಕೆಲವು ಸದಸ್ಯರು ತಿಳಿಸಿದಂತೆ ವಿಶ್ವವಿದ್ಯಾನಿಲಯದ ಹಣಕಾಸು ನಿರ್ವಹಣೆ, ಬ್ಯಾಂಕ್ ಖಾತೆಗಳು, ಠೇವಣಿ ಖಾತೆ ಇತ್ಯಾದಿಗಳ ವಿವರಗಳನ್ನು ಸಿದ್ದಪಡಿಸಿ ಸಿಂಡಿಕೇಟ್ ಸಭೆಗೆ ಒದಗಿಸಲಾಗುವುದೆಂದು ಅಗತ್ಯವಾದರೆ, ಈ ಕುರಿತು ಒಂದು ವಿಶೇಷ ಸಿಂಡಿಕೇಟ್ ಸಭೆಗೆ ಕರೆಯಲಾಗುವುದೆಂದು ತಿಳಿಸಲಾಯಿತು.

ವಿಷಯ ಸಂಖ್ಯೆ–11

**ಅಧೀಕ್ಷಕ/ಸಹಾಯಕ ಹುದ್ದೆಗಳಲ್ಲಿ ಪದೋನ್ನತಿ ಹೊಂದಿದ ನೌಕರರು ಮುಂಬಡ್ತಿಯನ್ನು ಅರ್ಹ ದಿನಾಂಕದಿಂದಲೇ ನೀಡುವಂತೆ ಹಾಗೂ ಮುಂಬಡ್ತಿ ಹುದ್ದೆಗಳ ವೇತನ ಶ್ರೇಣಿಗಳಲ್ಲಿನ ಅಸಮಾನತೆಯನ್ನು ಸರಿಪಡಿಸುವಂತೆ ನೀಡುರುವ ಮನವಿಗಳ ಬಗ್ಗೆ.**

ಪ್ರಸ್ತಾಪಿಸಲಾದ ವಿಷಯದಲ್ಲಿ 2 ವಿಷಯಗಳು – (1) ಬಡ್ತಿ ಹೊಂದಿದ ಇಬ್ಬರು ಸಿಬ್ಬಂದಿಗಳಿಗೆ ಅರ್ಹತೆ ಹೊಂದಿದ ದಿನಾಂಕದಿಂದ ಪೂರ್ವಾನ್ವಯಗೊಳಿಸಿ ಬಡ್ತಿ ದಿನಾಂಕ ನಿಗದಿಪಡಿಸುವುದು, (2) ಈ ಸಿಬ್ಬಂದಿಗಳ ವೇತನ ಶ್ರೇಣಿಯಲ್ಲಿ ಆಗಿರುವ ನ್ಯೂನ್ಯತೆಯನ್ನು ಸರಿಪಡಿಸುವುದು. ಅರ್ಹತೆ ಹೊಂದಿದ ದಿನಾಂಕದಿಂದ ಕಾಲ್ಪನಿಕವಾಗಿ ಬಡ್ತಿ ದಿನಾಂಕ ನಿಗಧಿಪಡಿಸಿ, ಅವರಿಗೆ ದೊರಕಬೇಕಾದ ಸೇವಾ ಸೌಲಭ್ಯ ನೀಡಬಹುದು, ಆದರೆ ಹಣಕಾಸಿನ ಸೌಲಭ್ಯ ನೀಡಲು ಅವಕಾಶವಿರುವುದಿಲ್ಲವೆಂದು ಮತ್ತು ವೇತನ ಶ್ರೇಣಿ ಕುರಿತು ಸರ್ಕಾರ ಹೊರಡಿಸಿದ ಆದೇಶದಲ್ಲಿ ಇರುವ ನ್ಯೂನ್ಯತೆಯನ್ನು ವಿವರಿಸಿ ಸರ್ಕಾರಕ್ಕೆ ಪತ್ರ ಬರೆದು ಅನುಮೋದನೆ ಬಂದ ನಂತರ ಸಿಬ್ಬಂದಿಗಳು ಕೋರಿದ ವೇತನ ಶ್ರೇಣಿ ನೀಡಬಹುದೆಂದು ಕುಲಸಚಿವರು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಹೆಚ್.ಟಿ ಅರವಿಂದ್ ಅವರು, ಈ ಹುದ್ದೆಗಳು ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡ ಹುದ್ದೆಗಳಾಗಿದ್ದು, ಆಯಾ ಹುದ್ದೆಗಳಿಗೆ ನಿಗದಿಯಾದ ವೇತನ ಶ್ರೇಣಿಗಳೊಂದಿಗೆ ಈ ಹುದ್ದೆಗಳು ವರ್ಗಾವಣೆಗೊಂಡಿವೆ. ಆದಕಾರಣ ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡ ಹುದ್ದೆಗಳಿಗೆ ಮತ್ತು ಹಾಗೆ ವರ್ಗಾವಣೆಗೊಂಡು ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಅಲ್ಲಿ ನೀಡಲಾಗುತ್ತಿರುವ ವೇತನ ಶ್ರೇಣಿಯನ್ನೇಇವರಿಗೂ ನೀಡಬೇಕಾಗುತ್ತದೆ ಎಂದು ತಿಳಿಸಿದರು. ಒಂದು ವೇಳೆ ಈ ಸಿಬ್ಬಂದಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮುಂದುವರೆದಿದ್ದರೆ ಅಲ್ಲಿರುವ ಅಧೀಕ್ಷರ ವೇತನ ಶ್ರೇಣಿ ಹಾಗೂ ಸಹಾಯಕರ ವೇತನ ಶ್ರೇಣಿ ಪಡೆಯುತ್ತಿದ್ದರು ಎಂದು ಹೇಳಿ ಅವರಿಗೆ ಸಿಗಬಹುದಾದ ಸೌಲಭ್ಯ ನೀಡಬೇಕೆಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಹೆಚ್.ಎನ್. ಹರಿಪ್ರಸಾದ ಅವರು ಸಹಮತ ವ್ಯಕ್ತಪಡಿಸಿ, ಅರ್ಹತಾ

ದಿನಾಂಕದಿಂದ ಕಾಲ್ಪನಿಕ ಬಡ್ತಿ ದಿನಾಂಕ (Notional date of promotion) ನೀಡಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಈ ಕುರಿತು ನೀಡುತ್ತಿರುವ ವೇತನ ಶ್ರೇಣಿ ಕುರಿತು ಮಾಹಿತಿ ಪಡೆದು ವೇತನ ಶ್ರೇಣಿ ನಿಗದಿಪಡಿಸಬಹುದೆಂದು ಹೇಳಿದರು.

ಸಿಂಡಿಕೇಟ್ ನಿರ್ಣಯ:

ಶ್ರೀಮತಿ ಟಿ. ಪದ್ಮಮ್ಮ ಮತ್ತು ಶ್ರೀ ವೆಂಕಟಾಚಲಾಪತಿ ಇವರಿಗೆ ಅವರು ಅರ್ಹತಾ ಹೊಂದಿದ ದಿನಾಂಕದಿಂದ ಯಾವುದೇ ಹಣಕಾಸಿನ ಬಾಧ್ಯತೆ ಇಲ್ಲದೇ ಕಾಲ್ಪನಿಕ ಬಡ್ತಿ ದಿನಾಂಕವನ್ನು ನಿಗದಿಪಡಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು. ಅಧೀಕ್ಷಕರ ಮತ್ತು ಸಹಾಯಕರ ವೇತನ ಶ್ರೇಣಿ ಕುರಿತು ಬೆಂಗಳೂರು ವಿಶ್ವವಿದ್ಯಾಲಯ / ಸರ್ಕಾರಕ್ಕೆ ಪತ್ರ ಬರೆದು ಅದರಂತೆ ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ-12

ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾಲೋಚಕರಿಗೆ ಕೇಂದ್ರ/ರಾಜ್ಯ ಸರ್ಕಾರ ಮತ್ತು ಶಾಸನ ಬದ್ಧ ಪ್ರಾಧಿಕಾರವಾದ ಯುಜಿಸಿ ಹಾಗೂ ಇನ್ನಿತರ ಇಲಾಖೆಗಳಲ್ಲಿ ನೀಡುತ್ತಿರುವಂತೆ ಸಮಾಲೋಚಕರ ಭತ್ಯೆಯನ್ನು ಭಾಗಲಬ್ಧ (rational) ಆಗಿ ನಿಗದಿಪಡಿಸುವ ಬಗ್ಗೆ.

ಈ ಕುರಿತು ಸಭೆ ಸುಧೀರ್ಘವಾಗಿ ಚರ್ಚಿಸಿತು. ವೇತನ/ಸಂಭಾವನೆಗಳನ್ನು ವರ್ಷದಲ್ಲಿ ಒಂದು ಸಲ ಪರಿಷ್ಕರಿಸಬೇಕು, ಇಂತಹ ಪ್ರಸ್ತಾವನೆಗಳು ಮೇಲಿಂದ ಮೇಲೆ ತರುವುದು ಸರಿಯಲ್ಲವೆಂದು ಸದಸ್ಯರು ಅಭಿಪ್ರಾಯಪಟ್ಟರು. ಒಂದು ವರ್ಷ ನಿರ್ವಹಿಸಿದ ಕೆಲಸವನ್ನು ವಿಮರ್ಶಿಸಿ ನಂತರ ಅವರ ಅರ್ಹತೆ ಹಾಗೂ ಕಾರ್ಯ ಕ್ಷಮತೆಯನ್ನು ಪರಿಗಣಿಸಿ ಸಂಭಾವನೆ/ವೇತನ ಹೆಚ್ಚು ಮಾಡುವ ಕುರಿತು ಪರಿಶೀಲಿಸಬೇಕು. ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುವ ಪ್ರತಿಯೊಬ್ಬ ಸಿಬ್ಬಂದಿ/ಸಮಾಲೋಚಕರು / ಗುತ್ತಿಗೆ ಸಿಬ್ಬಂದಿ ಇತ್ಯಾದಿ ಎಲ್ಲಾ ಸಿಬ್ಬಂದಿಗಳ ನೇಮಕಾತಿ ವಿವರ, ಅವರು ನಿರ್ವಹಿಸುವ ಕೆಲಸ, ಸೇವೆಗೆ ಸೇರಿದ ದಿನಾಂಕ, ಅವರಿಗೆ ನೀಡುತ್ತಿರುವ ಸಂಬಳ / ಸಂಭಾವನೆಗಳನ್ನು ಪರಿಷ್ಕರಿಸಿದ ದಿನಾಂಕ ಹಾಗೂ ಮೊತ್ತ ಇತ್ಯಾದಿ ವಿವರಗಳನ್ನು ಸಿದ್ದಪಡಿಸಿ, ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು, ಸದರಿ ಸಿಂಡಿಕೇಟ್ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ, ಈ ಕುರಿತು ನೀತಿ ನಿಯಮಗಳನ್ನು ಸಿದ್ಧಪಡಿಸಬೇಕಾಗುತ್ತದೆ ಎಂದು ಸಭೆ ಅಭಿಪ್ರಾಯಪಟ್ಟಿತು.

ಕುಲಪತಿಗಳು ವಿವರಣೆ ನೀಡಿ, ಈಗ ಮಂಡಿಸಿರುವ ಪ್ರಸ್ತಾವನೆ, ಒಂದೇ ಹುದ್ದೆಯ ಸಮಾಲೋಚಕರಿಗೆ ಮೂರು ಸಂಭಾವನೆ ದರಗಳನ್ನು ನೀಡುತ್ತಿರುವುದನ್ನು ಸರಿಪಡಿಸುವುದು ಹಾಗೂ ಕೆಲವು ಸಮಾಲೋಚಕರಿಗೆ ಸುಮಾರು ದಿವಸಗಳಿಂದ ಸಂಭಾವನೆ ಪರಿಷ್ಕರಿಸದೆ ಇರುವುದರಿಂದ ಅದನ್ನು ಪರಿಗಣಿಸುವ ಕುರಿತಾಗಿದ್ದು, ಈ ಪರಿಷ್ಕರಣೆಯಾದ ನಂತರ ಒಂದು ವರ್ಷದ ನಂತರವೇ ಪರಿಗಣಿಸಲು ಮಂಡಿಸಲಾಗುವುದೆಂದು ಹೇಳಿದರು.

ಸಿಂಡಿಕೇಟ್ ನಿರ್ಣಯ:

ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ / ಸಮಾಲೋಚಕರ / ಗುತ್ತಿಗೆ ಸಿಬ್ಬಂದಿಗಳ / ಹೊರಗುತ್ತಿಗೆ ಸ್ವಚ್ಛತಾ ಸಿಬ್ಬಂದಿಗಳ ಮೇಲೆ ತಿಳಿಸಿದಂತೆ ವಿವರವಾದ ಪ್ರಸ್ತಾವನೆ ಸಿದ್ಧಪಡಿಸಿ ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಬೇಕೆಂದು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ–14

ವಿಶ್ವವಿದ್ಯಾನಿಲಯದ ಕೇಂದ್ರೀಯ ಖರೀದಿ ಸಮಿತಿಗೆ ಸದಸ್ಯರನ್ನು ನಾಮನಿರ್ದೇರ್ಶನ ಮಾಡುವ ಕುರಿತು

ಈ ವಿಷಯವನ್ನು ಮಂದೂಡಿ ಮುಂಬರುವ ಪೂರ್ಣಾವಧಿ ಕುಲಪತಿಗಳು ಅಧಿಕಾರವಹಿಸಿಕೊಂಡ ನಂತರ ಪರಿಗಣಿಸಬಹುದೆಂದು ಕುಲಪತಿಗಳು ತಿಳಿಸಿದರು. ಸದಸ್ಯರ ನಾಮನಿರ್ದೇಶನ ಸಿಂಡಿಕೇಟ್ ಮಾಡಬೇಕಾಗಿರುವುದರಿಂದ ಈ ವಿಷಯವನ್ನು ಈ ಸಭೆಯಲ್ಲಿಯೇ ಪರಿಗಣಿಸಬಹುದೆಂದು ಸದಸ್ಯರು ಅಭಿಪ್ರಾಯಪಟ್ಟರು.

ಸಿಂಡಿಕೇಟ್ ನಿರ್ಣಯ:

ಶ್ರೀ ಟಿ. ಹೆಚ್. ಶ್ರೀನಿವಾಸಯ್ಯನವರನ್ನು ಕೇಂದ್ರೀಯ ಖರೀದಿ ಸಮಿತಿಗೆ ಡಾ. ಹೆಚ್. ಟಿ ಅರವಿಂದ್ ಅವರ ಸ್ಥಾನದಲ್ಲಿ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ–15

ವಿಶ್ವವಿದ್ಯಾನಿಲಯದ ಕಾಮಗಾರಿ ಸಮಿತಿಗೆ ಒಬ್ಬ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇರ್ಶನ ಮಾಡುವ ಕುರಿತು

ಈ ವಿಷಯವನ್ನು ಮಂದೂಡಿ ಮುಂಬರುವ ಪೂರ್ಣಾವಧಿ ಕುಲಪತಿಗಳು ಅಧಿಕಾರವಹಿಸಿಕೊಂಡ ನಂತರ ಪರಿಗಣಿಸಬಹುದೆಂದು ಕುಲಪತಿಗಳು ತಿಳಿಸಿದರು. ಸದಸ್ಯರ ನಾಮನಿರ್ದೇಶನ ಸಿಂಡಿಕೇಟ್ ಮಾಡಬೇಕಾಗಿರುವುದರಿಂದ ಈ ಸಭೆಯಲ್ಲಿಯೇಪರಿಗಣಿಸಬಹುದೆಂದು ಸದಸ್ಯರು ಅಭಿಪ್ರಾಯಪಟ್ಟರು.

ಸಿಂಡಿಕೇಟ್ ನಿರ್ಣಯ:

ಶ್ರೀ ಹೆಚ್. ಎನ್. ಹರಿಪ್ರಸಾದ ರವರನ್ನು ಕಾಮಗಾರಿ ಸಮಿತಿಗೆ ಶ್ರೀ ಹೆಚ್. ಆರ್ ಸತೀಶ್ ರವರ ಸ್ಥಾನದಲ್ಲಿ ನಾಮನಿರ್ದೇಶನ ಮಾಡಲು ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ–16

ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಉಡುಪು ತಂತ್ರಜ್ಞಾನ ಮತ್ತು ನಿರ್ವಹಣಾ ವಿಭಾಗದ ಬೋಧಕರನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ಉಡುಪು ತಂತ್ರಜ್ಞಾನ ಮತ್ತು ನಿರ್ವಹಣಾ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ 3ಜನ ಸಹಾಯಕ ಪ್ರಾಧ್ಯಾಪಕರು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಹೊಂದಲು ಅಭಿಮತ ನೀಡಿದಲ್ಲಿ ಆ ಕುರಿತು ಸರ್ಕಾರಕ್ಕೆ ಪತ್ರ ಬರೆದು ಅವರನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡುವಂತೆ ವಿನಂತಿಸಬೇಕೆಂದು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ–17

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ "ಶಿಕ್ಷಣ ವಿಭಾಗ" ವನ್ನು ಸ್ಥಾಪಿಸಲು ಕುರಿತು.

ಸಿಂಡಿಕೇಟ್ ನಿರ್ಣಯ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಸ್ನಾತ್ತಕೋತ್ತರ ವಿಭಾಗ ಪ್ರಾರಂಭಿಸಲು ಹಾಗೂ ಅದಕ್ಕೆ ಅಗತ್ಯವಾದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹುದ್ದೆಗಳ ಸೃಜನೆ ಕುರಿತು ಪರಿನಿಯಮಗಳನ್ನು ಸಿದ್ಧಪಡಿಸಲು ಪರಿನಿಯಮ ರಚನಾ ಸಮಿತಿಗೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

ಪ್ರಸ್ತುತ ಪರಿನಿಯಮ ರಚನಾ ಸಮಿತಿಯಅಧ್ಯಕ್ಷರಾಗಿರುವ ಪ್ರೊ: ಬಿ. ತಿಮ್ಮೇಗೌಡ ರವರು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾಗಿ ನೇಮಕ ಹೊಂದಿರುವುದರಿಂದ, ಅವರು ಮುಂದುವರೆಯುವ ಕುರಿತು ಮಾಹಿತಿ ಪಡೆದು, ಅಗತ್ಯವಾದಲ್ಲಿ ಬೇರೊಬ್ಬರನ್ನು ಅಧ್ಯಕ್ಷರಾಗಿ ನಾಮಕರಣ ಮಾಡಲು ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ಸೂಚಿಸಲಾಯಿತು.

ವಿಷಯ ಸಂಖ್ಯೆ–18

ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ತೋಟಗಾರಿಕೆ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿಯ ಸೇವೆಯನ್ನು ಮುಂದುವರೆಸಲು ಅನುಮೋದನೆ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ತೋಟಗಾರಿಕೆ ಸಲಹೆಗಾರರಾಗಿದ್ದ ಶ್ರೀ ನಾರಾಯಣ ಸ್ವಾಮಿಯವರು ಈಗ ಸೇವೆಗೆ ಬರುತ್ತಿಲ್ಲವಾದ್ದರಿಂದ ವಿಷಯವನ್ನು ಕೈಬಿಡಲಾಯಿತು. ಉದ್ಯಾನ ನಿರ್ವಹಣೆ ಕುರಿತು ಪ್ರತ್ಯೇಕವಾದ ವಿಷಯ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವುದಾಗಿ ಸಭೆಗೆ ತಿಳಿಸಲಾಯಿತು.

ವಿಷಯ ಸಂಖ್ಯೆ–20

**Starting of M.Sc Botany with 20 seats and enhancement of intake for M.Sc (Bio-Technology) in Maharani Lakshmi Ammanni College for Women(Autonomous) for the academic year 2020–21**

ಸ್ವಾಯತ್ತ ಮಹಾವಿದ್ಯಾಲಯಗಳ ಪರಿನಿಯಮಗಳಲ್ಲಿರುವ ಮಾಹಿತಿಯನ್ನು ಸಭೆಗೆ ವಿವರಿಸಲಾಯಿತು. ಮಾನ್ಯ ಸದಸ್ಯರಾದ ಡಾ. ಹೆಚ್.ಟಿ. ಅರವಿಂದ ರವರು ಸದರಿ ಮಹಾವಿದ್ಯಾಲಯದ ಆಡಳಿತ ಮಂಡಳಿಗೆ ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿದ್ದು ಹೆಚ್ಚಿನ ವಿವರಗಳನ್ನು ಸಭೆಗೆ ಒದಗಿಸಿದರು. ಸ್ವಾಯತ್ತ ಮಹಾವಿದ್ಯಾಲಯಗಳ ಶೈಕ್ಷಣಿಕ ಮಂಡಳಿ ಮತ್ತು ಆಡಳಿತ ಮಂಡಳಿ ಅನುಮೋದನೆ ಪಡೆದು ಹೊಸ ಕೋರ್ಸು ಪ್ರಾರಂಭಿಸಲು ಅವಕಾಶವಿದೆ ಎಂದು ತಿಳಿಸಿದರು. ಪದವಿಗಳನ್ನು ವಿಶ್ವವಿದ್ಯಾನಿಲಯದಿಂದ ನೀಡುವುದರಿಂದ ಅವರು ಪ್ರಾರಂಭಿಸುತ್ತಿರುವ ಕೋರ್ಸಿನ ಮಾಹಿತಿ ನೀಡಿ ಅನುಮೋದನೆ ಪಡೆಯುತ್ತಾರೆಂದು ಹೇಳಿದರು.

ಸಿಂಡಿಕೇಟ್ ನಿರ್ಣಯ:

ಜೀವ ತಂತ್ರಜ್ಞಾನ ವ್ಯಾಸಂಗಕ್ಕೆ ಪ್ರಸ್ತುತ 20 ಪ್ರವೇಶ ಸಂಖ್ಯೆಯನ್ನು 30 ಕ್ಕೆ ಹೆಚ್ಚಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ಎಂ.ಎಸ್.ಸಿ ಸಸ್ಯಶಾಸ್ತ್ರ ವಿಭಾಗವನ್ನು ಪ್ರಾರಂಭಿಸುವ ಕುರಿತು, ಸ್ವಾಯತ್ತ ಮಹಾವಿದ್ಯಾಲಯಗಳ ವಾರ್ಷಿಕ ನಿರ್ವಹಣಾ ಸಮೀಕ್ಷೆ ಸಂದರ್ಭದಲ್ಲಿ ಪರಿಗಣಿಸಬಹುದೆಂದು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ–21

**ಡಾ: ಟಿ. ಎನ್. ತಾಂಡವಗೌಡ, ಸಹಾಯಕ ಪ್ರಾಧ್ಯಾಪಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಅವರನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಿರುವ ಬಗ್ಗೆ.**

ಕೆಲವು ಸದಸ್ಯರು ಡಾ. ಟಿ. ಎನ್. ತಾಂಡವಗೌಡ ಅವರಿಗೆ ಈ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೆ ಸಹಮತ ಸೂಚಿಸುವ ಪೂರ್ವದಲ್ಲಿ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಬೇಕಾಗಿತ್ತು ಎಂದು ಹೇಳಿದರು. ಮಾನ್ಯ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ ರವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಸೆಕ್ಷನ್ 58(2) ನ್ನು ಉಲ್ಲೇಖಿಸಿ ಅಂತರ್ ವಿಶ್ವವಿದ್ಯಾಲಯಗಳ ವರ್ಗಾವಣೆ ಸಂಬಂಧಿಸಿದಂತೆ, ಕುಲಾಧಿಪತಿಗಳು ನೇಮಕಾತಿ ಪ್ರಾಧಿಕಾರವಾಗಿರುತ್ತಾರೆ ಹಾಗೂ ಆಡಳಿತ್ಮಾಕ ದೃಷ್ಟಿಯಿಂದ ಇಂತಹ ವರ್ಗಾವಣೆ ಮಾಡಲು ಅವರಿಗೆ ಅಧಿಕಾರವಿದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಸಿಂಡಿಕೇಟ್ ನಿರ್ಣಯ:

ಡಾ. ಟಿ. ಎನ್. ತಾಂಡವಗೌಡ, ಸಹಾಯಕ ಪ್ರಾಧ್ಯಾಪಕರು ಇಂಗ್ಲೀಷ್ ವಿಭಾಗ ಅವರನ್ನು ಈ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಕುರಿತಂತೆ ಸಿಂಡಿಕೇಟ್ ಸಭೆಗೆ ಮಂಡಿಸಿ ಅನುಮೋದನೆ ಪಡಯಬೇಕಾಗಿತ್ತು ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಇನ್ನು ಮುಂದೆ ಅಧೀಕಾರಿಗಳು, ಇಂತಹ ವರ್ಗಾವಣೆಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಸಿಂಡಿಕೇಟ್ ಅನುಮತಿ ಪಡೆದು ಮುಂದಿನ ಕ್ರಮವಹಿಸಲು ತೀರ್ಮಾನಿಸಲಾಯಿತು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದಲ್ಲಿ ಇಂತಹ ವರ್ಗಾವಣೆಗೆ ಕುಲಾಧಿಪತಿಗಳಿಗೆ ಅಧಿಕಾರ ಇರುವುದರಿಂದ ಇವರ ವರ್ಗಾವಣೆ ಹಾಗೂ ಕಾರ್ಯ ವರದಿಗಳಿಗೆ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ-22

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿರುವ ಬಿಲ್ಲುಗಳ ಕುರಿತು ವಿವರಗಳನ್ನು ಒದಗಿಸುವ ಬಗ್ಗೆ.

ಕುಲಸಚಿವರು (ಮೌಲ್ಯಮಾಪನ) ರವರು ವಿವರಗಳನ್ನು ಸಭೆಗೆ ನೀಡಿದರು. ಬೆಂಗಳೂರು ವಿಶ್ವವಿದ್ಯಾಲಯ 4(ಜಿ) ವಿನಾಯಿತಿ ಹೊಂದಿದ್ದು, ನಮ್ಮ ವಿಶ್ವವಿದ್ಯಾನಿಲಯವೂ ಸರ್ಕಾರಕ್ಕೆ 4(ಜಿ) ವಿನಾಯಿತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಇ-ಪ್ರಶ್ನೆಪತ್ರಿಕೆ ವಿತರಣಾ ವ್ಯವಸ್ಥೆಯ ತಂತ್ರಾಂಶ ಅಳವಡಿಸಿಕೊಂಡಲ್ಲಿ ವೆಚ್ಚ ಕಡಿಮೆ ಮಾಡಬಹುದು ಎಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ:

ಪ್ರಸ್ತಾವನೆಯಲ್ಲಿ ತಿಳಿಸಿದ ಪ್ರಶ್ನೆಪತ್ರಿಕೆಗಳ ಮುದ್ರಣ ಗೌಪ್ಯ ಕೆಲಸವಾಗಿದ್ದು, ಇದು ಕೆ.ಟಿ.ಪಿ.ಪಿ. ಕಾಯ್ದೆ ಪ್ರಕಾರ ಆಗಿರುವುದಿಲ್ಲ. ವಿಶ್ವವಿದ್ಯಾನಿಲಯಕ್ಕೆ 4(ಜಿ) ವಿನಾಯಿತಿ ಇರುವುದಿಲ್ಲದಿರುವುದರಿಂದ ಈ ಕಾರ್ಯಗಳನ್ನು ನಿರ್ವಹಿಸಿದ ಸಂಸ್ಥೆಗೆ ಹಣವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಆದ್ದರಿಂದ ಆ ಸಂದರ್ಭದಲ್ಲಿ ತೀರ್ಮಾನಗಳನ್ನು ತೆಗೆದುಕೊಂಡ ಅಂದಿನ ಅಧಿಕಾರಿಗಳು ಮುಂದಿನ ಆಗುಹೋಗುಗಳಿಗೆ ಜವಾಬ್ದಾರರಾಗುತ್ತಾರೆ. ಮೇಲಿನ ಅಭಿಪ್ರಾಯಗಳಿಗೆ ಒಳಪಟ್ಟು ಪ್ರಸ್ತಾವನೆಯಲ್ಲಿ ನಮೂದಿಸಿದಂತೆ ರೂ. 43,32,870/- (ರೂಪಾಯಿ ನಲ್ವತ್ತಮೂರು ಲಕ್ಷ ಮೂವತ್ತೆರಡು ಸಾವಿರದ ಎಂಟುನೂರ ಎಪ್ಪತ್ತು ಮಾತ್ರ) ಪಾವತಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ–23

43 ನೇ ಸಮಾಜ ವಿಜ್ಞಾನ ಕಾಂಗ್ರೆಸ್ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ಸಮಿತಿಗೆ ಒಬ್ಬ ಸದಸ್ಯರನ್ನು ನಾಮ ನಿರ್ದೇಶನ ಮಾಡುವ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ಶ್ರೀ ಎಂ. ಚಿಕ್ಕಮುನಿಯಪ್ಪ, ಸಿಂಡಿಕೇಟ್ ಸದಸ್ಯರವರನ್ನು ವಿಚಾರಣ ಸಮಿತಿ ಸದಸ್ಯರಾಗಿ ನಾಮನಿರ್ದೇಶನ ಮಾಡಲು ಹಾಗೂ ಸಮಿತಿಯ ಅವಧಿಯನ್ನು ಜನವರಿ 15, 2021 ರ ವರೆಗೆ ವಿಸ್ತರಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ವಿಷಯ ಸಂಖ್ಯೆ–24

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಯವರ ಕಛೇರಿ ಕೆಲಸಗಳಿಗಾಗಿ ವಿ.ವಿ.ವತಿಯಿಂದ ಮಾಸಿಕ ಬಾಡಿಗೆ ಆಧಾರದ ಮೇರೆಗೆ ಒಂದು ಲಘು ವಾಹನವನ್ನು ಒದಗಿಸಿರುವ ಬಗ್ಗೆ ಘಟನೋತ್ತರ ಮಂಜೂರಾತಿ ಹಾಗೂ ಸದರಿ ಸೇವೆಯನ್ನು ಮುಂದುವರೆಸಲು ಅನುಮೋದನೆಗಾಗಿ

ಸಿಂಡಿಕೇಟ್ ನಿರ್ಣಯ:

ವಿಷಯವನ್ನು ಹಿಂದಕ್ಕೆ ಪಡೆಯಲಾಯಿತು.

ವಿಷಯ ಸಂಖ್ಯೆ–25

ವಿಶ್ವವಿದ್ಯಾನಿಲಯದ ಸಂಯೋಜನೆ, ಪ್ರವೇಶ ಹಾಗೂ ಪರೀಕ್ಷೆಗಳ ಉಸ್ತುವಾರಿ [Monitoring Affiliation, Admission and Examination(MAAE)] ಕುರಿತು ರಚಿಸಲಾದ ಸಿಂಡಿಕೇಟ್ ಸ್ಥಾಯಿ ಸಮಿತಿಗೆ ಒಬ್ಬ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡುವ ಕುರಿತು

ಸಿಂಡಿಕೇಟ್ ನಿರ್ಣಯ:

ಡಾ. ಪಿ. ವಿ. ಪದ್ಮಜಾ, ಸಿಂಡಿಕೇಟ್ ಸದಸ್ಯರವರನ್ನು **Monitoring Affiliation, Admission and Examination (MAAE)** ಸ್ಥಾಯಿ ಸಮಿತಿ ಸದಸ್ಯರಾಗಿ ನಾಮನಿರ್ದೇಶನ ಮಾಡಲು ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ–26

**ಡಾನ್ ಬಾಸ್ಕೋ ವಿದ್ಯಾ ಸಂಸ್ಥೆಯ ಸಂಯೋಜನೆಹಿಲ್ಲದೆ ವಿದ್ಯಾರ್ಥಿಗಳನ್ನು ಪದವಿ ಕೋರ್ಸುಗಳಿಗೆ ಪ್ರವೇಶ ನೀಡುತ್ತಿರುವುದನ್ನು ತಡೆಗಟ್ಟಲು**

ಪ್ರಸ್ತಾವನೆಯ ವಿವರಗಳನ್ನು ಕುಲಸಚಿವರು ಸಭೆಗೆ ತಿಳಿಸಿದರು. ಡಾನ್ ಬಾಸ್ಕೋ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಎಂಬ ಹೆಸರಿನಲ್ಲಿ ಪಿ.ಜಿ. ಡಿಪ್ಲೋಮಾ ಇನ್ ಮಾರ್ಕೆಟಿಂಗ್, ಪಿ.ಜಿ. ಡಿಪ್ಲೋಮಾ ಇನ್ ಬಿಸ್‌ನಸ್ ಆಡ್ಮಿನಿಸ್ಟ್ರೇಷನ್ ಮತ್ತು ಪಿ.ಜಿ. ಡಿಪ್ಲೋಮಾ ಇನ್ ಹಾಸ್ಪಿಟಾಲಿಟಿ ಎಂಬ ಕೋರ್ಸಿಗಾಗಿ 2019–20 ಸಾಲಿಗೆ ಹೊಸ ಸಂಯೋಜನೆ ಅರ್ಜಿಸಲ್ಲಿಸಿದ್ದು ವಿಶ್ವವಿದ್ಯಾನಿಲಯದಿಂದ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ, ಅದು ಸರ್ಕಾರದ ಮಟ್ಟದಲ್ಲಿ ಬಾಕಿಯಿದೆ. ಈ ಸಂಸ್ಥೆಯವರು ಮಾಸ್ಟರ್ಸ್ ಇನ್ ಬಿಗ್ ಡೇಟ ಮತ್ತು ಬಿಸಿನಸ್ ಅನಾಲಿಟಿಕ್ಸ್ ಕಾಮರ್ಸ್ ವಿಷಯಗಳಿಗೆ ವಿಶ್ವವಿದ್ಯಾಲಯದ ಸಂಯೋಜನೆ ಇಲ್ಲದೆ ಜಾಹಿರಾತು ನೀಡಿ ಹೆಚ್ಚು ಶುಲ್ಕ ಪಡೆದು ಪ್ರವೇಶಾತಿ ಮಾಡಿಕೊಂಡಿರುತ್ತಾರೆ ಎಂದು ವಿದ್ಯಾರ್ಥಿಗಳು ನೀಡಿದ ದೂರುಗಳ ಮೇಲೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಸೂಚಿಸಿದಂತೆ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಾಲಾಗಿದೆ. ಆಂಧ್ರಪ್ರದೇಶ ಸರ್ಕಾರ ಸಹ ಈ ಕುರಿತು ನೀಡಿದ ದೂರನ್ನು ಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವುದರಿಂದ ಸದರಿ ದೂರನ್ನು ಜಯನಗರ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿದೆ, ಈ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯದಂತೆ ವಿಶ್ವವಿದ್ಯಾನಿಲಯದಿಂದ ಸೂಚಿಸಿ ಪತ್ರಿಕಾ ಪ್ರಕಟಣೆ ನೀಡಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.

**ಸಿಂಡಿಕೇಟ್ ನಿರ್ಣಯ:**

**ಸರ್ಕಾರದ ಸೂಚನೆಯಂತೆ ಪೊಲೀಸ್ ಠಾಣೆಗೆ ದೂರು ಸಲ್ಲಿಸಿರುವುದನ್ನು ಹಾಗೂ ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವುದನ್ನು ಸಭೆ ಗಮನಿಸಿ ಅನುಮೋದಿಸಿತು.**

ವಿಷಯ ಸಂಖ್ಯೆ–28 ಹಾಗೂ ವಿಷಯ ಸಂಖ್ಯೆ–29

**(28) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ E-Question Paper Delivery System ಅಳವಡಿಸಿಕೊಳ್ಳುವ ಸಂಬಂಧ ತತ್ರಾಂಶ ಸೇವೆ ಪಡೆದುಕೊಳ್ಳುವ ಕುರಿತು**

**(29) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ Online Digital Evaluation System (ODES) ತತ್ರಾಂಶವನ್ನು ಅನುಷ್ಠಾನಗೊಳಿಸಲು ಮತ್ತು ಈ ಸಂಬಂಧ ಪ್ರಸ್ತಾವನೆ ಸಿದ್ದಪಡಿಸಲು ಸಮಿತಿ ರಚಿಸುವ ಕುರಿತು.**

ಸಿಂಡಿಕೇಟ್ ನಿರ್ಣಯ:

ವಿಷಯ ಸಂಖ್ಯೆ 28 ಹಾಗೂ 29 ಗಳನ್ನು ಒಟ್ಟಿಗೆ ಪರಿಗಣನೆಗೆ ತೆಗೆದುಕೊಳ್ಳಲಾಯಿತು. ಈ ಕುರಿತು ಪರಿಶೀಲಿಸಿ ಅಗತ್ಯ ಶಿಫಾರಸ್ಸುಗಳನ್ನು ಮಾಡಲು ಕೆಳಕಂಡ ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು:

1. ಶ್ರೀಮತಿ ಜ್ಯೋತಿ ವಿಜಯ್ – ಅಧ್ಯಕ್ಷರು
2. ಡಾ. ಕೃಷ್ಣಮೂರ್ತಿ,
   ಪ್ರಾಂಶುಪಾಲರು,
   ಬಿ.ಎನ್.ಎಂ.ಐ.ಟಿ, ಬೆಂಗಳೂರು – ಸದಸ್ಯರು
3. ಎನ್.ಐ.ಸಿ ಇಂದ ಒಬ್ಬರು ಪ್ರತಿನಿಧಿ – ಸದಸ್ಯರು
4. ಕುಲಸಚಿವರು (ಮೌಲ್ಯಮಾಪನ) – ಸದಸ್ಯ ಕಾರ್ಯದರ್ಶಿ

ವಿಷಯ ಸಂಖ್ಯೆ–34

**To consider fixation of honorarium to the Chairman of the Committee constituted to verify the 43rd Indian Social Science Congress-reg**

ಸಿಂಡಿಕೇಟ್ ನಿರ್ಣಯ:

ಸಮಿತಿಯ ಅಧ್ಯಕ್ಷರು ಕೋರಿರುವಂತೆ ರೂ 1,50,000/– (ರೂಪಾಯಿ ಒಂದು ಲಕ್ಷ ಐವತ್ತು ಸಾವಿರ ಮಾತ್ರ) ಗಳ ಒಟ್ಟು ಸಂಭಾವನೆ ನೀಡಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ವಿಷಯ ಸಂಖ್ಯೆ–35

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ವಿವಿಧ ಕಾಲೇಜಿನ 38 ವಿದ್ಯಾರ್ಥಿಗಳು ಮರು ಪರೀಕ್ಷೆ ನಡೆಸಲು ಮನವಿ ಮಾಡಿರುವ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ಕೋವಿಡ್–19 ನಿಂದಾಗಿ ಪರೀಕ್ಷೆ ಬರೆಯಲು ಸಾಧ್ಯವಾಗದಿರುವ ವಿದ್ಯಾರ್ಥಿಗಳಿಗೆ ವಿಶೇಷ ಪೂರಕ ಪರೀಕ್ಷೆ ನಡೆಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ಕುಲಸಚಿವರು ಸಭಾಧ್ಯಕ್ಷರಿಗೆ ಮತ್ತು ಎಲ್ಲಾ ಸದಸ್ಯರಿಗೆ ವಂದನೆಗಳನ್ನು ಅರ್ಪಿಸಿದ ನಂತರ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ